☞ ಹಾವೇರಿ
☞ ಗದಗ
☞ ಧಾರವಾಡ
☞ ದಾವಣಗೆರೆ
☞ ಚಿತ್ರದುರ್ಗ
☞ ವಿಜಯನಗರ
☞ ಶಿವಮೊಗ್ಗ
☞ ಬಳ್ಳಾರಿ

ಸುದ್ದಿ, ಫೋಟೋ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ : 9480410207

ಪಾಂಡವ

PANDAVA Regional Kannada News Paper ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಪತ್ರಿಕೆ, ಜಾಹೀರಾತು ಇಸ್ತಿಯಾರನಾಮೆಗಳಿಗಾಗಿ ಸಂಪರ್ಕಿಸಿ : ಮೊಬೈಲ್ ನಂ. : 9742789207 7411679202

* Volume : XVII * Issue : 077 * SATURDAY 14, NOVEMBER 2026 * Editor : S.T. VEDAMURTHY * Page : 6 * Rs : 2.50 * RNI No. KARKAN/2011/39005 * PMG/KA/NK/HVR-028/2026-28 * pandavarnr@gmail.com * Mob No.: 9742789207

ಪ್ರಮುಖ ಸಂಕ್ಷಿಪ್ತ ಸುದ್ದಿ

ಇಂದು ಯುವ ಸೌರಭ ಕಾರ್ಯಕ್ರಮ

ಪಾಂಡವ ನ್ಯೂಸ್, ಹಾವೇರಿ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಯುವ ಸೌರಭ ಕಾರ್ಯಕ್ರಮ ನವೆಂಬರ್ 14 ರಂದು ಬೆಳಿಗ್ಗೆ 10–30 ಗಂಟೆಗೆ ಹಾವೇರಿ ನಗರದ ಪ್ರವಾಸಿತಾಣ ಗಾಂಧಿ ಭವನದಲ್ಲಿ ಜರುಗಲಿದೆ.

ಕೇಂದ್ರ ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಶಿಕ್ಷಣ ಸಚಿವರಾದ ಪ್ರಹ್ಲಾದ ಜೋಶಿ, ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ್ ಅವರ ಘನ ಉಪಸ್ಥಿತಿಯಲ್ಲಿ, ಸಕ್ಕರೆ ಮತ್ತು ಜವಳಿ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಉದ್ಘಾಟನೆ ನೆರವೇರಿಸಿ ಅಧ್ಯಕ್ಷತೆ ವಹಿಸಿಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳು ಹಾಗೂ ಲೋಕಸಭಾ ಸದಸ್ಯರಾದ ಬಸವರಾಜ ಎಸ್.ಬೊಮ್ಮಾಯಿ ಅವರು ಗೌರವ ಉಪಸ್ಥಿತರಿರುವರು.ಮುಖ್ಯ ಅತಿಥಿಗಳಾಗಿ ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಅಧ್ಯಕ್ಷ ಸೈಯದ್ ಅಜೀಮ್‌ಪೀರ್ ಎಸ್ ಖಾದ್ರಿ, ಶಾಸಕರು ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶ್ರೀನಿವಾಸ ಮಾನೆ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ, ಶಾಸಕರಾದ ಯು.ಬಿ.ಬಣಕಾರ, ಪ್ರಕಾಶ ಕೋಳಿವಾಡ, ಶಾಸಕರು ಹಾಗೂ ಬೆಳಗಾವಿ ಮತ್ತು ಕಲಬುರಗಿ ವಿಭಾಗದ ಅಲ್ಪಸಂಖ್ಯಾತರ ವಸತಿ ನಿಲಯಗಳ ಆಹಾರ ಪರಿಶೀಲನ ಸಮಿತಿ ಅಧ್ಯಕ್ಷರಾದ ಯಾಸೀರ ಅಹ್ಮದ್‌ಖಾನ್ ಪಠಾಣ, ವಿಧಾನ ಪರಿಷತ್ ಶಾಸಕರಾದ ಬಸವರಾಜ ಹೊರಟ್ಟಿ, ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹನುಮಂತಪ್ಪ ಮರಗಡಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರು ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ.ಮೈದೂರ ಪಾಲ್ಗೊಳ್ಳಲಿದ್ದಾರೆ.

ಮನೆ ಬೀಗ ಮುರಿದು 1 ಲಕ್ಷ ನಗದು, ಚಿನ್ನಾಭರಣ ಕಳವು

ಪಾಂಡವ ನ್ಯೂಸ್, ಹಾವೇರಿ : ಮನೆಯ ಬೀಗ ಮುರಿದು ಒಳನುಗ್ಗಿದ ಕಳ್ಳರು ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಹಾಗೂ 1 ಲಕ್ಷ ನಗದು ದೋಚಿಕೊಂಡು ಪರಾರಿಯಾಗಿರುವ ಘಟನೆ ತಾಲೂಕಿನ ಕುಳೇನೂರಿನಲ್ಲಿ ನಡೆದಿದೆ. ಕುಳೇನೂರಿನ ಪ್ಲಾಟ್‌ನಲ್ಲಿರುವ ಫಕೀರೇಶ ಗುಡ್ಡಪ್ಪ ಬಾಳಣ್ಣನವರ ಎಂಬುವವರ ಮನೆಯಲ್ಲಿ ಬುಧವಾರ ಬೆಳಿಗ್ಗೆ 10.30ರಿಂದ ಸಂಜೆ 4.30ರ ನಡುವಿನ ಅವಧಿಯಲ್ಲಿ ಕಳ್ಳತನ ನಡೆದಿದೆ. ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಮುರಿದು ಒಳನುಗ್ಗಿದ ಕಳ್ಳರು, ಟ್ರಜರಿಯ ಬೀಗವನ್ನೂ ಮುರಿದು ಅದರಲ್ಲಿದ್ದ 1 ಲಕ್ಷ ನಗದು, ಅಂದಾಜು 1.25 ಲಕ್ಷ ಮೌಲ್ಯದ ಚಿನ್ನದ ಕೊರಳ ಚೈನ್, 60 ಸಾವಿರ ಮೌಲ್ಯದ ಮೂರು ಜೊತೆ ಚಿನ್ನದ ಕಿವಿಯೋಲೆಗಳು ಹಾಗೂ 70 ಸಾವಿರ ಮೌಲ್ಯದ ಅರ್ಧ ತೊಲೆಯ ಚಿನ್ನದ ಕಿವಿಯೋಲೆಗಳನ್ನು ಕದ್ದಿದ್ದಾರೆ.ಇದರೊಂದಿಗೆ 16 ತೊಲೆಯ ಬೆಳ್ಳಿ ಕಾಲು ಚೈನ್ (24 ಸಾವಿರ), 8 ತೊಲೆಯ ಬೆಳ್ಳಿ ಕಾಲುಂಗುರ ಹಾಗೂ ಕೈಪೋಚು (12 ಸಾವಿರ), 7 ತೊಲೆಯ ಬೆಳ್ಳಿ ಕೊರಳ ಚೈನ್ (10 ಸಾವಿರ), 2 ತೊಲೆಯ ಬೆಳ್ಳಿ ಲಿಂಗದಕಾಯಿ (3 ಸಾವಿರ) ಹಾಗೂ 2 ತೊಲೆಯ ಬೆಳ್ಳಿ ಬ್ರಾಸ್‌ಲೆಟ್ (3 ಸಾವಿರ) ಕಳವು ಮಾಡಿದ್ದಾರೆ.ಈ ಕುರಿತು ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಳ್ಳರ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ನಮ್ಮ ಮೆಟ್ರೊದ ಪಿಂಕ್‌ಲೈನ್ ಮೆಟ್ರೊ ಲೋಕಾರ್ಪಣೆ ಮಾಡಿದ ಪ್ರಧಾನಿ ಮೋದಿ




ಪಾಂಡವ ನ್ಯೂಸ್, ಬೆಂಗಳೂರು : ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಮತ್ತೊಂದು ಮಹತ್ವದ ಸೇರ್ಪಡೆಯಾಗಿ, ನಮ್ಮ ಮೆಟ್ರೊದ ಪಿಂಕ್ ಲೈನ್‌ನ ಕಾಳೇನಅಗ್ರಹಾರ–ತಾವರೆಕೆರೆ ನಡುವಿನ 7.5 ಕಿಲೋಮೀಟರ್ ಉದ್ದದ ಎಲಿವೇಟೆಡ್ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರ ಸೇವೆಗೆ ಲೋಕಾರ್ಪಣೆಗೊಳಿಸಿದರು.

ಈ ಮೂಲಕ ಬೆಂಗಳೂರಿನ ನಮ ಮೆಟ್ರೊ ರೈಲು ರಾಷ್ಟ್ರ ರಾಜಧಾನಿ ನವದೆಹಲಿಯ ನಂತರ 2ನೇ ಅತಿ ಉದ್ದದ ಮೆಟ್ರೊ ಜಾಲ ಹೊಂದಿದ 2ನೇ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜಧಾನಿ ಬೆಂಗಳೂರಿನ ಹೆಮೆಯ ನಮ ಮೆಟ್ರೊ ರೈಲು ಇದೀಗ ಮೊದಲ ಬಾರಿಗೆ 100 ಕಿಲೋಮೀಟರ್ ಗಡಿ ದಾಟಿ ಸುಮಾರು 103.6 ಕಿಲೋಮೀಟರ್‌ಗೆ ವಿಸ್ತರಣೆಯಾಗಿದೆ.ನಗರದ ತಾವರೆಕೆರೆ ಮೆಟ್ರೊ ನಿಲ್ದಾಣದ ಬಳಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ನರೇಂದ್ರಮೋದಿ ಅವರು ಪಿಂಕ್ ಲೈನ್ ಮಾರ್ಗಕ್ಕೆ ಹಸಿರುನಿಶಾನೆ ತೋರಿದರು.ರಾಜ್ಯಪಾಲರಾದ ಡಾ.ಸುಧಾ ಯಾದವ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಕೃಷ್ಣ ಬೈರೇಗೌಡ, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು. ನಂತರ ಮೋದಿ ಸೇರಿದಂತೆ ಹಲವು ಗಣ್ಯರು ತಾವರೆಕೆರೆಯಿಂದ ಐಐಎಂಬಿ ಮೆಟ್ರೊ ನಿಲ್ದಾಣದವರೆಗೆ ರೈಲಿನಲ್ಲಿ ಪ್ರಯಾಣಿಸಿದರು. ಈ ಹೊಸ ಮಾರ್ಗವು ವಿಶೇಷವಾಗಿ ಬನ್ನೆರುಘಟ್ಟ ರಸ್ತೆ ಹಾಗೂ ದಕ್ಷಿಣ ಬೆಂಗಳೂರಿನ ಭಾಗಗಳಲ್ಲಿ ಸಂಚಾರ ಸಂಪರ್ಕವನ್ನು ಸುಧಾರಿಸುವ ನಿರೀಕ್ಷೆಯಿದೆ. ಪ್ರತಿದಿನದ ವಾಹನ ಸಂಚಾರದಟ್ಟಣೆ, ಪ್ರಯಾಣದ ಸಮಯ ಮತ್ತು ರಸ್ತೆ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಈ ಮಾರ್ಗ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ. ಕಾಳೇನಅಗ್ರಹಾರ–ತಾವರೆಕೆರೆ ಎಲಿವೇಟೆಡ್ ಭಾಗವನ್ನು ಸುಮಾರು 3,470 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಪ್ರಯಾಣಿಕರಿಗೆ ನಾಳೆಯಿಂದ ಸೇವೆ ಆರಂಭವಾಗಲಿದೆ.ಪಿಂಕ್ ಲೈನ್ ಸಂಪರ್ಕಿಸುವ ಪ್ರದೇಶಗಳು ಪ್ರಸ್ತುತ ಉದ್ಘಾಟನೆಯಾಗಿರುವ 7.5 ಕಿ.ಮೀ. ಮಾರ್ಗದಲ್ಲಿ ಒಟ್ಟು ಆರು ನಿಲ್ದಾಣಗಳಿದ್ದು, ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ ಬಿಳೇಕಹಳ್ಳಿ, ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ, ತಾವರೆಕೆರೆಯನ್ನು ಒಳಗೊಂಡಿದೆ. ಪ್ರಸ್ತುತ ಉದ್ಘಾಟನೆಯಾಗಿರುವ 7.5 ಕಿ.ಮೀ. ಮಾರ್ಗದಲ್ಲಿ ಒಟ್ಟು ಆರು ನಿಲ್ದಾಣಗಳಿದ್ದು, ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ ಬಿಳೇಕಹಳ್ಳಿ, ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ, ತಾವರೆಕೆರೆಯನ್ನು ಒಳಗೊಂಡಿದೆ.

2ನೇ ಪುಟಕ್ಕೆ ▶▶▶

ವಿಎಒ ಪರೀಕ್ಷಾ ಅಕ್ರಮ: ನಾಲ್ವರು ಪೊಲೀಸರಿಗೆ ಅಮಾನತು ಬಿಸಿ



ಪಾಂಡವ ನ್ಯೂಸ್, ಹಾವೇರಿ : ಗ್ರಾಮ ಆಡಳಿತ ಅಧಿಕಾರಿ (ವಿಎಒ) ನೇಮಕಾತಿ ಪರೀಕ್ಷೆಯಲ್ಲಿ ಮೊಬೈಲ್ ಬಳಸಿ ಅಕ್ರಮ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪದ ಆರೋಪದಡಿ ನಾಲ್ವರು ಪೊಲೀಸ್ ಕಾನ್‌ಸ್ಟೇಬಲ್‌ಗಳು ಹಾಗೂ ಆರು ಹೋಮ್‌ಗಾರ್ಡ್‌ಗಳನ್ನು ಅಮಾನತುಗೊಳಿಸಲಾಗಿದೆ.

ಶಿಗ್ಗಾವಿಯ ಪರೀಕ್ಷಾ ಕೇಂದ್ರದಲ್ಲಿ ಅ.4ರಂದು ನಡೆದಿದ್ದ ಪರೀಕ್ಷೆಯಲ್ಲಿ ಅಭ್ಯರ್ಥಿ ಶಂಕರ ಬನ್ನೂರು ಮೊಬೈಲ್ ಬಳಸಿ ಅಕ್ರಮ ಎಸಗಿದ್ದ ಆರೋಪ ಕೇಳಿಬಂದಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಶಂಕರನನ್ನು ಬಂಧಿಸಿದ್ದು, ಆತ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಗಳ ತಪಾಸಣೆ ಹಾಗೂ ಭದ್ರತಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ಸಿಬ್ಬಂದಿ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ನಾಲ್ವರು ಕಾನ್‌ಸ್ಟೇಬಲ್‌ಗಳ ವಿರುದ್ಧ ಅಮಾನತು ಕ್ರಮ ಕೈಗೊಳ್ಳಲಾಗಿದೆ.

ಅಮಾನತುಗೊಂಡವರು: ಶಿಗ್ಗಾವಿ ಠಾಣೆಯ ಸಿ.ಎ. ಮರಣ್ಣನವರ, ಪಿ.ಸಿ. ಹೊನ್ನಾಳಿ, ಸವಣೂರು ಠಾಣೆಯ ಆರ್.ಎಂ. ಮಣಕವಾಡ ಹಾಗೂ ಆಡೂರು ಠಾಣೆಯ ಎಸ್.ಆರ್. ನಾಗನೂರು.

ಇದೇ ಪ್ರಕರಣದಲ್ಲಿ ಶಿಗ್ಗಾವಿ ಠಾಣೆಯ ಇನ್‌ಸ್ಪೆಕ್ಟರ್ ವಿ.ಎಸ್. ಹಿರೇಮಠ ಹಾಗೂ ಪಿಎಸ್‌ಐ ಉಮಾ ಪಾಟೀಲ ಅವರ ಕರ್ತವ್ಯ ಲೋಪವೂ ಮೇಲ್ನೋಟಕ್ಕೆ ಕಂಡುಬಂದಿದೆ.

ಅವರ ವಿರುದ್ಧವೂ ಶಿಸ್ತುಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.

ಕಾಡುಹಂದಿ ಬೇಟೆ; ಆರೋಪಿ ಬಂಧನ



ಪಾಂಡವ ನ್ಯೂಸ್, ಹಾವೇರಿ : ಕಾಡುಹಂದಿಯನ್ನು ಬೇಟೆಯಾಡಿ ಸುಟ್ಟು ಮಾಂಸ ಮಾರಾಟಕ್ಕೆ ಯತ್ನಿಸಿದ ಆರೋಪದ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಓರ್ವನನ್ನು ಬಂಧಿಸಿದ್ದಾರೆ.

ಬುಧವಾರ ರಂದು ನಾಗೇಂದ್ರನಮಟ್ಟಿಯಿಂದ ಕರ್ಜಗಿ ಕಡೆಗೆ ತೆರಳುತ್ತಿದ್ದ ಅರಣ್ಯ ಇಲಾಖೆ ಸಿಬ್ಬಂದಿಗೆ ರಸ್ತೆಯ ಪಕ್ಕದ ಜಾಲಿ ಗಿಡಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಪರಿಶೀಲಿಸಿದಾಗ ಕಾಡುಹಂದಿಯನ್ನು ಸುಡುತ್ತಿರುವುದು ಪತ್ತೆಯಾಗಿದೆ. ಸ್ಥಳೀಯರನ್ನು ವಿಚಾರಿಸಿದಾಗ ಬೇಟೆಯಾಡಿ ಮಾಂಸ ಮಾರಾಟಕ್ಕೆ ಸಿದ್ಧತೆ ನಡೆಸಿರುವುದು ತಿಳಿದುಬಂದಿದೆ.

ತಕ್ಷಣ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ನಾಗೇಂದ್ರನಮಟ್ಟಿಯ ಅಜ್ಜಪ್ಪ ಪರಸಪ್ಪ ಕುಂಚಿಕೊರವ (29) ಎಂಬಾತನನ್ನು ಬಂಧಿಸಿದ್ದಾರೆ. ಸ್ಥಳದಿಂದ ಸುಟ್ಟ ಕಾಡುಹಂದಿ, ಜೀವಂತ ಕಾಡುಹಂದಿ ಹಾಗೂ ಬೇಟೆಗೆ ಬಳಸಿದ ಆಯುಧಗಳನ್ನು ವಶಪಡಿಸಿಕೊಂಡಿದ್ದಾರೆ.ಸುಟ್ಟ ಹಂದಿಯನ್ನು ನ್ಯಾಯಾಲಯದ ಅನುಮತಿಯಂತೆ ನಿಯಮಾನುಸಾರ ವಿಲೇವಾರಿ ಮಾಡಲಾಗಿದೆ. ಜೀವಂತ ಹಂದಿಯನ್ನು ವೈದ್ಯಕೀಯ ತಪಾಸಣೆ ಬಳಿಕ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಅಕ್ಷಯ್ ಪ್ರಕಾಶಕರ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅನುಷಾ ಅವರ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಸಿದ್ದಮ್ಮ ಕರಿಗಾರ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಾಕಾರಂಜಿಯಲ್ಲಿ ಕಂಚಾರಗಟ್ಟಿ ಶಾಲೆಯ ಐವರಿಗೆ ತಾಲೂಕು ಮಟ್ಟದ ಗೌರವ



ಪಾಂಡವ ನ್ಯೂಸ್, ಗುತ್ತಲ : ಸಮೀಪದ ಎಂ.ಜಿ.ತಿಮ್ಮಾಪುರ ಗ್ರಾಮದಲ್ಲಿ ನಡೆದ ಹಾವನೂರ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ಸ್ಪರ್ಧೆಯಲ್ಲಿ ಕಂಚಾರಗಟ್ಟಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಐವರು ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಶಾಲೆಯ ವಿದ್ಯಾರ್ಥಿಗಳಾದ ನೂರಿಪ್ಪ ಮೆಡ್ಲೇರಿ, ರೂಪ ಮರಿದ್ಯಾವಣ್ಣನವರ, ಯೋಗೇಶ ಯತ್ನಳ್ಳಿ, ಹರ್ಷ ಬಾರ್ಕಿ ಹಾಗೂ ಅನ್ವಿತಾ ಆರಿಕಟ್ಟಿ ಅವರು ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿ ಗಮನ ಸೆಳೆದಿದ್ದಾರೆ. ಐವರು ವಿದ್ಯಾರ್ಥಿಗಳು ಮುಂದಿನ ಹಂತಕ್ಕೆ ಆಯ್ಕೆಯಾಗಿರುವುದು ಶಾಲೆಯ ಶಿಕ್ಷಕರು, ಪಾಲಕರು ಹಾಗೂ ಗ್ರಾಮಸ್ಥರಲ್ಲಿ ಹರ್ಷ ಮೂಡಿಸಿದೆ.

ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಕ್ಲಸ್ಟರ್ ಮಟ್ಟದ ಸ್ಪರ್ಧೆಯಲ್ಲಿ ಸಾಧನೆ ಮಾಡಿರುವುದು ವಿಶೇಷವಾಗಿದೆ. ಪಠ್ಯದ ಜತೆಗೆ ಸಾಂಸ್ಕೃತಿಕ ಹಾಗೂ ಸೃಜನಶೀಲ ಚಟುವಟಿಕೆಗಳಲ್ಲಿಯೂ ಮಕ್ಕಳಿಗೆ ಅವಕಾಶ ಕಲ್ಪಿಸಿದಾಗ ಅವರಲ್ಲಿನ ಪ್ರತಿಭೆ ಹೊರಹೊಮ್ಮಲು ಸಾಧ್ಯ ಎಂಬುದಕ್ಕೆ ಈ ಸಾಧನೆ ಸಾಕ್ಷಿಯಾಗಿದೆ.

ವಿದ್ಯಾರ್ಥಿಗಳ ಸಾಧನೆಯ ಹಿಂದೆ ಶಿಕ್ಷಕರ ಮಾರ್ಗದರ್ಶನ, ನಿರಂತರ ಪ್ರೋತ್ಸಾಹ ಹಾಗೂ ವಿದ್ಯಾರ್ಥಿಗಳ ಪರಿಶ್ರಮವಿದೆ. ತಾಲೂಕು ಮಟ್ಟದ ಸ್ಪರ್ಧೆಗೂ ಆಯ್ಕೆಯಾಗಿರುವ ವಿದ್ಯಾರ್ಥಿಗಳು ಹೆಚ್ಚಿನ ಉತ್ಸಾಹದಿಂದ ಸಿದ್ಧತೆ ನಡೆಸಿ ಮತ್ತಷ್ಟು ಸಾಧನೆ ಮಾಡಬೇಕೆಂಬ ಆಶಯವನ್ನು ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ.

ವಿಜೇತ ವಿದ್ಯಾರ್ಥಿಗಳಿಗೆ ಗ್ರಾಮದ ಮುಖಂಡರು, ಶಾಲೆಯ ಎಸ್ ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು,ಮುಖ್ಯಶಿಕ್ಷಕ ವೀರಪ್ಪ ಸುಣಗಾರ ಹಾಗೂ ಸಹಶಿಕ್ಷಕರು ಅಭಿನಂದನೆ ಸಲ್ಲಿಸಿ ಸಂತಸ ವ್ಯಕ್ತಪಡಿಸಿದ್ದಾರೆ. ತಾಲೂಕು ಮಟ್ಟದ ಸ್ಪರ್ಧೆಯಲ್ಲಿಯೂ ಉತ್ತಮ ಸಾಧನೆ ಮಾಡಿ ಶಾಲೆ ಹಾಗೂ ಗ್ರಾಮದ ಕೀರ್ತಿ ಹೆಚ್ಚಿಸುವಂತೆ ಹಾರೈಸಿದ್ದಾರೆ.

ಹಿರೇಕೆರೂರು–ಸ್ಥಿರಾಸ್ತಿಗಳ ಮಾರುಕಟ್ಟೆ ದರ ಪರಿಷ್ಕರಣೆ–ಆಕ್ಷೇಪಣೆಗೆ ಅವಕಾಶ

ಪಾಂಡವ ನ್ಯೂಸ್, ಹಾವೇರಿ : ಹಿರೇಕೆರೂರು ತಾಲೂಕು ವ್ಯಾಪ್ತಿಯ ಸ್ಥಿರಾಸ್ತಿಗಳ ಮಾರುಕಟ್ಟೆ ದರಗಳನ್ನು 2026–27ನೇ ಸಾಲಿಗೆ ದಿ.06–011–2026 ರಂದು ಜರುಗಿದ ತಾಲೂಕು ಮೌಲ್ಯಮಾಪನ ಉಪ ಸಮಿತಿ ಸಭೆಯಲ್ಲಿ ಪರಿಷ್ಕರಿಸಲಾಗಿದೆ.

ಈ ಪರಿಷ್ಕರಿಸಿದ ಸ್ಥಿರಾಸ್ತಿ ಮಾರುಕಟ್ಟೆ ದರಗಳ ಕರಡು ಪ್ರತಿಯನ್ನು ಸಾರ್ವಜನಿಕ ಸಲಹೆ ಸೂಚನೆ ಆಕ್ಷೇಪಣೆಗಳಿಗಾಗಿ ಕಚೇರಿಯ ಸೂಚನಾ ಫಲಕದಲ್ಲಿ ದಿನಾಂಕ 11–11–2026 ರಂದು ಪ್ರಕಟಿಸಲಾಗಿದೆ. ಈ ಕುರಿತು ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಾರ್ವಜನಿಕರು ಸೂಕ್ತ ದಾಖಲೆಗಳೊಂದಿಗೆ ಪ್ರಕಟಣೆಯ 15 ದಿನದೊಳಗಾಗಿ ಉಪ ನೋಂದಣಿ ಅಧಿಕಾರಿಗಳ ಕಚೇರಿ, ಹಿರೇಕೆರೂರು ಇವರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬೇಕು ಎಂದು ಹಿರೇಕೆರೂರು ತಾಲೂಕು ಮೌಲ್ಯಮಾಪನ ಉಪ ಸಮಿತಿ ಸದಸ್ಯ ಕಾರ್ಯದರ್ಶಿಗಳು ಹಾಗೂ ಉಪ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಯಂತಿ ಆಚರಣೆ ಪೂರ್ವಭಾವಿ ಸಭೆ

ಪಾಂಡವ ನ್ಯೂಸ್, ಹಾವೇರಿ : ಕನಕದಾಸರ ಜಯಂತಿ ಆಚರಣೆ ಪೂರ್ವಭಾವಿ ಸಭೆ ನ.16 ರಂದು ಮಧ್ಯಾಹ್ನ 3–30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಕೋರ್ಟ್ ಹಾಲ್‌ನಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಕನ್ನಡ

ಮೊದಲ ಪುಟದಿಂದ.....

ನಮ್ಮ ಮೆಟ್ರೊದ ಪಿಂಕ್‌ಲೈನ್.....

ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಯೆಲ್ಲೊ ಲೈನ್‌ಗೆ ಸಂಪರ್ಕ ದೊರೆಯುವುದರಿಂದ ಎಲೆಕ್ಟ್ರಾನಿಕ್ ಸಿಟಿ ಭಾಗಕ್ಕೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ಎಲ್ಲೆಲ್ಲಿಗೆ ಸಂಪರ್ಕ? ಸಂಪೂರ್ಣ 21.26 ಕಿ.ಮೀ. ಪಿಂಕ್ ಲೈನ್ ದಕ್ಷಿಣ ಬೆಂಗಳೂರಿನ ಕಾಳೇನಅಗ್ರಹಾರದಿಂದ ಉತ್ತರ ಬೆಂಗಳೂರಿನ ನಾಗವಾರದವರೆಗೆ ಸಂಪರ್ಕ ಕಲ್ಪಿಸಲಿದೆ. ಒಟ್ಟು 18 ನಿಲ್ದಾಣಗಳನ್ನು ಹೊಂದಲಿರುವ ಈ ಮಾರ್ಗದಲ್ಲಿ ತಾವರೆಕೆರೆ–ನಾಗವಾರ ಭಾಗವು ಭೂಗತ ಮಾರ್ಗವಾಗಿರಲಿದೆ.ಮುಂದಿನ ಹಂತದಲ್ಲಿ ಈ ಮಾರ್ಗವು ಡೇರಿ ಸರ್ಕಲ್, ಲಕ್ಕಸಂದ್ರ, ಲ್ಯಾಂಗ್‌ಫೋರ್ಡ್ ಟೌನ್, ನ್ಯಾಷನಲ್ ಮಿಲಿಟರಿ ಸ್ಕೂಲ್, ಎಂಜಿ ರಸ್ತೆ, ಶಿವಾಜಿನಗರ, ಕಂಟೋನೆಂಟ್, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಕಡುಗೊಂಡನಹಳ್ಳಿ ಮತ್ತು ನಾಗವಾರ ಭಾಗಗಳಿಗೆ ಸಂಪರ್ಕ ಕಲ್ಪಿಸಲಿದೆ.

ಹೀಗಾಗಿ ಪಿಂಕ್ ಲೈನ್ ಪೂರ್ಣಗೊಂಡ ಬಳಿಕ ದಕ್ಷಿಣ ಬೆಂಗಳೂರಿನ ಕಲೇನ ಅಗ್ರಹಾರ–ಬನ್ನೆರುಘಟ್ಟ ರಸ್ತೆ ಪ್ರದೇಶದಿಂದ ಉತ್ತರ ಬೆಂಗಳೂರಿನ ನಾಗವಾರದವರೆಗೆ ನೇರ ಮೆಟ್ರೊ ಸಂಪರ್ಕ ಸಿಗಲಿದೆ. ಐಐಎಂಬಿ, ಜಯದೇವ ಆಸ್ಪತ್ರೆ, ಜೆ.ಪಿ.ನಗರ, ಎಂಜಿ ರಸ್ತೆ, ಶಿವಾಜಿನಗರ ಸೇರಿದಂತೆ ಪ್ರಮುಖ ವಾಣಿಜ್ಯ, ಶಿಕ್ಷಣ, ವೈದ್ಯಕೀಯ ಮತ್ತು ವಸತಿ ಪ್ರದೇಶಗಳಿಗೆ ಸಂಪರ್ಕ ಮತ್ತಷ್ಟು ಸುಗಮವಾಗಲಿದೆ.

ಹೊಸ ಮಾರ್ಗದ 6 ನಿಲ್ದಾಣಗಳು : ತಾವರೆಕೆರೆಯಿಂದ ನಾಗವಾರದವರೆಗಿನ 13.8 ಕಿ.ಮೀ. ಉದ್ದದ ಸುರಂಗ ಮಾರ್ಗದ ಕಾಮಗಾರಿಯು 2027ಕ್ಕೆ ಮುಕ್ತಾಯಗೊಳ್ಳಲಿದೆ. ನಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ ಒಟ್ಟು 18 ನಿಲ್ದಾಣಗಳಿದ್ದು ಬನ್ನೆರುಘಟ್ಟ ರಸ್ತೆಯ ಎತ್ತರಿಸಿದ ಮಾರ್ಗದಲ್ಲಿರುವ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ ಬೆಂಗಳೂರು , ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ, ತಾವರೆಕೆರೆ ನಿಲ್ದಾಣಗಳು ಈಗ ರೈಲು ಸಂಚಾರಕ್ಕೆ ಮುಕ್ತವಾಗಲಿವೆಟಿಜಜಜಿಟಿಜಜ.

ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಂದ ಪಿಂಕ್ ಲೈನ್‌ನ ಮೊದಲ ಹಂತದ ಉದ್ಘಾಟನೆಯು ಬೆಂಗಳೂರಿನ ಮೆಟ್ರೊ ವಿಸ್ತರಣೆಯಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ನಗರದ ಮೆಟ್ರೊ ಜಾಲವನ್ನು 100 ಕಿ.ಮೀ. ಗಡಿ ದಾಟಿಸಿರುವುದರ ಜೊತೆಗೆ, ದಕ್ಷಿಣ–ಉತ್ತರ ಬೆಂಗಳೂರಿನ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

ನೇರ ಸಂದರ್ಶನ

ಪಾಂಡವ ನ್ಯೂಸ್, ಗದಗ : ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವತಿಯಿಂದ ನವೆಂಬರ್ 18 ಬುಧವಾರರಂದು ಬೆಳಿಗ್ಗೆ 10–00 ಗಂಟೆಗೆ ನಗರದ ಉತ್ಸವಭವನ ಹತ್ತಿರ, ಹುಬ್ಬಳ್ಳಿ ರೋಡ ಮೀರ್ಸಾಕುಲಮ್ ಕಿಯಾ ಕಂಪನಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ನೇರ ಸಂದರ್ಶನದಲ್ಲಿ ಮೀರ್ಸಾಕುಲಮ್‌ಕಿಯಾ ಕಂಪನಿ ಭಾಗವಹಿಸಲಿದೆ. ಎಸ್.ಎಸ್.ಎಲ್.ಸಿ, ಪಿ.ಯು.ಸಿ ಐ.ಟಿ.ಐ, ಡಿಪ್ಲೋಮಾ ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು. ಸರ್ವಿಸ್ ಮ್ಯಾನೇಜರ್, ಸೇಲ್ಸ ಎಕ್ಸಿಕೂಟಿವ್, ಟೇಕ್ನೀಶಿಯನ, ಸರ್ವಿಸ್‌ಕನಸಲ್ಟಂಟ, ಪಾರ್ಟಸ್ ಮ್ಯಾನೇಜರ್, ಟೇಲಿ ಕಾರ್ಲಸ್, ಮಾರ್ಕೆಟಿಂಗ ಎಕ್ಸಿಕೂಟಿವ್, ಮ್ಯಾನೇಜರ್ಸ, ಡೆಂಟರ್, ಪೇಂಟರ್, ರಿಸಪ್ಶನಿಸ್ಟ ಹುದ್ದೆಗಳು ಖಾಲಿ ಇವೆ. 18 ರಿಂದ 45 ವಯಸ್ಸು ಹೊಂದಿರಬೇಕು.

ನೇರ ಸಂದರ್ಶನದಲ್ಲಿ ಪಾಲ್ಗೊಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, 2 ರೆಸ್ಯೂಮೆ(ಬಯೋಡಾಟಾ)ಪ್ರತಿಗಳು, ಮತ್ತು ಆಧಾರಕಾರ್ಡ್ ಝೆರಾಕ್ಸ್‌ನೊಂದಿಗೆ ಭಾಗವಹಿಸಬಹುದು. ನೇರ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹಾಗೂ ಯುವನಿಧಿ ಯೋಜನೆಯ ಫಲಾನುಭವಿಗಳು ಈ ನೇರ ಸಂದರ್ಶನದಲ್ಲಿ ಕಡ್ಡಾಯವಾಗಿ ಪಾಲ್ಗೋಳಬೇಕು.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ, 8310111569, 8088562596, 6363330688 ಕ್ಕೆ ಸಂಪರ್ಕಿಸಲು ಕೋರಲಾಗಿದೆಯೆಂದು ಜಿಲ್ಲಾ ಉದ್ಯೋಗಾಧಿಕಾರಿಯಾದ ಬಸವಂತ ಪಿ ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲೈಡ್ ಹೆಲ್ತ್ ಸೈನ್ಸ್ ಮತ್ತು ಫಿಸಿಯೋಥೆರಪಿ ಸೀಟುಗಳ ಭರ್ತಿಗೆ ಆಫ್‌ಲೈನ್ ಕೌನ್ಸೆಲಿಂಗ್



ಪಾಂಡವ ನ್ಯೂಸ್, ಚಿತ್ರದುರ್ಗ : ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಅಒಅಖಿಖ) ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್‌ನಲ್ಲಿ 2026–27ನೇ ಸಾಲಿಗೆ ಪ್ರವೇಶಾತಿಗೆ ಬಾಕಿ ಉಳಿದಿರುವ ವಿವಿಧ ಪದವಿ ಕೋರ್ಸ್‌ಗಳ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಪಾರದರ್ಶಕವಾಗಿ ಭರ್ತಿ ಮಾಡಿಕೊಳ್ಳಲು ನವೆಂಬರ್ 14 ರಂದು ಆಫ್‌ಲೈನ್ ಕೌನ್ಸೆಲಿಂಗ್ (ನೇರ ಪ್ರವೇಶ) ಹಮ್ಮಿಕೊಳ್ಳಲಾಗಿದೆ.

ಕೆಇಎ (ಏಇಂ) ವತಿಯಿಂದ ಕೌನ್ಸೆಲಿಂಗ್ ಮುಗಿದು ಭರ್ತಿಯಾಗದೆ ಉಳಿದಿರುವ ಸೀಟುಗಳಿಗೆ, ಸಿಇಟಿ (ಅಇಖಿ) ನೋಂದಣಿ ಸಂಖ್ಯೆ ಹೊಂದಿರುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮುಖ್ಯ ಆಡಳಿತಾಧಿಕಾರಿಗಳು, ನಿರ್ದೇಶಕರು, ನೋಡಲ್ ಅಧಿಕಾರಿಗಳು ಹಾಗೂ ಪ್ರಾಂಶುಪಾಲರನ್ನು ಒಳಗೊಂಡ ಸಮಿತಿಯ ಮೂಲಕ ಪ್ರಾಂಶುಪಾಲರ ಹಂತದಲ್ಲಿ ಈ ಪ್ರಕ್ರಿಯೆ ನಡೆಯಲಿದೆ. ಬಿ.ಎಸ್ಸಿ. ಪದವಿಯ ಕೋರ್ಸ್‌ನ ಅನಸ್ತೇಶಿಯಾ ಮತ್ತು ಆಪರೇಷನ್ ಥಿಯೇಟರ್ ಟೆಕ್ನಾಲಜಿ ಯಲ್ಲಿ 22, ಎಮರ್ಜೆನ್ಸಿ ಅಂಡ್ ಟ್ರಾಮಾ ಕೇರ್ ಟೆಕ್ನಾಲಜಿ 30, ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ 40, ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ 30, ಆಪ್ಟೋಮೆಟ್ರಿ 29, ರೆನಲ್ ಡಯಾಲಿಸಿಸ್ ಟೆಕ್ನಾಲಜಿ 20 ಸೀಟುಗಳು ಹಾಗೂ ಬ್ಯಾಚುಲರ್ ಆಫ್ ಫಿಸಿಯೋಥೆರಪಿ 40, ಬ್ಯಾಚುಲರ್ ಆಫ್ ಪಬ್ಲಿಕ್ ಹೆಲ್ತ್ 30 ಸೀಟುಗಳು ಖಾಲಿಯಿವೆ. ಆಸಕ್ತ ವಿದ್ಯಾರ್ಥಿಗಳು ನವೆಂಬರ್ 14ರ ಮಧ್ಯಾಹ್ನ 12:00 ಗಂಟೆಯೊಳಗೆ ಜಿ.ಆರ್.ಹಳ್ಳಿ ಜ್ಞಾನ ಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಕಾಲೇಜಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ನವೆಂಬರ್ 14 ರಂದೇ ಕೌನ್ಸೆಲಿಂಗ್ ನಡೆಸಿ ಸಂಜೆ 5:00 ಗಂಟೆಯೊಳಗೆ ಸೀಟು ಹಂಚಿಕೆ ಮಾಡಲಾಗುವುದು. ಸೀಟು ಪಡೆದ ಅಭ್ಯರ್ಥಿಗಳು ಅಂದೇ ಕಡ್ಡಾಯವಾಗಿ ದಾಖಲಾತಿ ಮಾಡಿಕೊಳ್ಳಬೇಕು.

ವಿದ್ಯಾರ್ಥಿಗಳು ಕಾಲೇಜಿನ ಅಧಿಕೃತ ವೆಬ್‌ಸೈಟ್ ಛಿಣಣಥಿ:// ಛಿಟಛಿಡಿಖಿಣಡಿಚಿಜಣಡಿರಚಿ.ಞಚಿಡಿಟಿಚಿಣಚಿಞಚಿ.ರಠಠ. ಟಟಿ ಇಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ತರಬೇಕು. ಶುಲ್ಕದ ವಿವರ ಹಾಗೂ ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಅಥವಾ ಕಾಲೇಜು ಕೆಲಸದ ವೇಳೆಯಲ್ಲಿ ನೇರವಾಗಿ ಭೇಟಿ ಮಾಡಿ ಪಡೆಯಬಹುದು ಎಂದು ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಬಿ.ವೈ.ಯುವರಾಜ್ ತಿಳಿಸಿದ್ದಾರೆ.

ಜೋಯಿಸರಹರಳಹಳ್ಳಿಯಲ್ಲಿ ಶುದ್ಧ ಗಂಗಾ ಘಟಕಕ್ಕೆ ಚಾಲನೆ

ಫ್ಲೋರೈಡ್‌ಯುಕ್ತ ನೀರು ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ: ಶಾಸಕ ಶಿವಣ್ಣನವರ

ಪಾಂಡವ ನ್ಯೂಸ್, ರಾಣೇಬೆನ್ನೂರು : ತಾಲೂಕಿನ ಜೋಯಿಸರಹರಳಹಳ್ಳಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಸ್ಥಾಪಿಸಲಾದ ಶುದ್ಧ ಗಂಗಾ ಕುಡಿಯುವ ನೀರಿನ ಘಟಕಕ್ಕೆ ಶಾಸಕ ಬಸವರಾಜ ಶಿವಣ್ಣನವರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಫ್ಲೋರೈಡ್‌ಯುಕ್ತ ನೀರು ಸೇವಿಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ. ಹೀಗಾಗಿ ಗ್ರಾಮಸ್ಥರು ಅಶುದ್ಧ ನೀರಿನ ಬಳಕೆ ತಪ್ಪಿಸಿ, ಶುದ್ಧ ಕುಡಿಯುವ ನೀರನ್ನು ಸೇವಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಶುದ್ಧ ಕುಡಿಯುವ ನೀರು ಅತ್ಯವಶ್ಯಕವಾಗಿದ್ದು, ಗ್ರಾಮದ ಎಲ್ಲ ಕುಟುಂಬಗಳು ಘಟಕದ ಸದುಪಯೋಗ ಪಡೆದುಕೊಳ್ಳಬೇಕು. ಘಟಕದ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳುವ ಜವಾಬ್ದಾರಿಯೂ ಗ್ರಾಮಸ್ಥರ ಮೇಲಿದೆ ಎಂದರು.



ಗ್ರಾಮೀಣ ಜನರ ಅನುಕೂಲಕ್ಕಾಗಿ ಹಲವು ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಸೇವೆ ಶ್ಲಾಘನೀಯ. ಇಂತಹ ಜನೋಪಯೋಗಿ ಯೋಜನೆಗಳ ಮೂಲಕ ಗ್ರಾಮೀಣ ಜನರ ಬದುಕಿಗೆ ನೆರವಾಗುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ಕೆ ಕೃತಜ್ಞತೆ ಸಲ್ಲಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಯೋಜನಾಧಿಕಾರಿ ಮಹಾದೇವ ನಾಯಕ್ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ತಾಲೂಕಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಶುದ್ಧ ಗಂಗಾ ಯೋಜನೆಯ ಕಾರ್ಯವೈಖರಿ ಹಾಗೂ ಘಟಕದ ಕಾರ್ಯಕ್ಷಮತೆಯ ಕುರಿತು ಯೋಜನಾಧಿಕಾರಿ ಫಕ್ಕೀರಪ್ಪ ಬೆಲ್ಲಾಮುದ್ದಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರವೀಣ್ ಕುಮಾರ, ಗ್ರಾಮದ ಗಣ್ಯರಾದ ಬಸವರಾಜ, ಶಂಕರ ಚಕ್ರಶಾಲಿ, ಶುದ್ಧ ಗಂಗಾ ವಿಭಾಗದ ಲೆಕ್ಕಪರಿಶೋಧಕ ಶಶಿಕಿರಣ್, ಮೇಲ್ವಿಚಾರಕರಾದ ಸುರೇಶ, ಮಂಜುನಾಥ, ಸೇವಾಪ್ರತಿನಿಧಿ, ಗ್ರಾಮಸ್ಥರು ಹಾಗೂ ಸ್ವಸಹಾಯ ಸಂಘಗಳ ಸದಸ್ಯರು ಉಪಸ್ಥಿತರಿದ್ದರು.

ಸಾವಕಾರ ಕಾನೂನು ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ

ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸುವುದು ಕಾನೂನು ಸೇವಾ ಸಮಿತಿಯ ಉದ್ದೇಶ : ನ್ಯಾಯಾಧೀಶ ಈರಣ್ಣ ಈ.ಎಸ್.



ಪಾಂಡವ ನ್ಯೂಸ್, ರಾಣೇಬೆನ್ನೂರು : ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸಿಕೊಡುವಲ್ಲಿ ಕಾನೂನು ಅರಿವು ಮತ್ತು ಕಾನೂನು ಸೇವಾ ಸಮಿತಿಗಳ ಪಾತ್ರ ಮಹತ್ವದ್ದಾಗಿದೆಎಂದು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷ ಈರಣ್ಣ ಈ.ಎಸ್. ಹೇಳಿದರು.

ನಗರದ ಸಾವಕಾರ ಕಾನೂನು ಮಹಾವಿದ್ಯಾಲಯದಲ್ಲಿ ಗುರುವಾರ ಜರುಗಿದ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ಶಿಕ್ಷಣ ಇಲಾಖೆ ಹಾಗೂ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಹಾಗೂ ಕಾನೂನು ಅರಿವು–ನೆರವುಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಖ್ಯಉಪನ್ಯಾಸ ನೀಡಿದ ಪ್ಯಾನಲ್ ವಕೀಲ ಕುಮಾರ ಡಿ. ಮಡಿವಾಳರ, ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆಯ ಮಹತ್ವ ಮತ್ತು ಉದ್ದೇಶ ಕುರಿತು ಮಾತನಾಡಿ, ಆರ್ಥಿಕವಾಗಿ ಹಿಂದುಳಿದವರು ಹಾಗೂ ಅಸಹಾಯಕರು ನ್ಯಾಯದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಉಚಿತ ಕಾನೂನು ನೆರವು ಒದಗಿಸಲಾಗುತ್ತಿದೆ. ಕಾನೂನು ವಿದ್ಯಾರ್ಥಿಗಳು ಇಂತಹ ಜಾಗೃತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನರಲ್ಲಿ ಕಾನೂನು ಅರಿವು ಮೂಡಿಸಬೇಕು ಎಂದರು.

ಮಹಾವಿದ್ಯಾಲಯದ ಪ್ರಾಂಶುಪಾಲ ಹನುಮಂತಪ್ಪ ಜಿ.ಟಿ. ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ದಿವಾಣಿ ನ್ಯಾಯಾಧೀಶ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಆದಿತ್ಯ ಕುಮಾರ ಹೆಚ್.ಆರ್., ವಕೀಲರ ಸಂಘದಅಧ್ಯಕ್ಷಬಿ.ಎಚ್. ಬುರಡಿಕಟ್ಟಿ, ಉಪಾಧ್ಯಕ್ಷ ಹೆಚ್.ಹೆಚ್. ತಿಮ್ಮೇನಹಳ್ಳಿ, ಕಾರ್ಯದರ್ಶಿ ಸುರೇಶಎನ್. ದ್ಯಾವಣ್ಣನವರ, ಅಪರ ಸರ್ಕಾರಿ ವಕೀಲ ಟಿ.ಎಸ್. ಜಂಗರಡ್ಡೇರ, ಓಂ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಸತೀಶ ಹಿರೇಮಠ ಉಪಸ್ಥಿತರಿದ್ದರು.

ಕಾಲೇಜಿನ ಬೋಧಕ ವರ್ಗ, ನ್ಯಾಯವಾದಿಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಿರಂತರ ವಿದ್ಯುತ್ ಪೂರೈಕೆಗೆ ಹೆಸ್ಕಾಂ ಕ್ರಮ: 42 ಫೀಡರ್‌ಗಳಲ್ಲಿ ನಿರ್ವಹಣಾ ಕಾರ್ಯಾಚರಣೆ

ಪಾಂಡವ ನ್ಯೂಸ್, ಹಾವೇರಿ : ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸುವ ಹಾಗೂ ನಿರಂತರ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸುವಉದ್ದೇಶದಿಂದ ಹೆಸ್ಕಾಂ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಶೇಷ ವಿದ್ಯುತ್ ನಿರ್ವಹಣಾಕಾರ್ಯಾಚರಣೆ ಯಶಸ್ವಿಯಾಗಿ ಕೈಗೊಳ್ಳಲಾಗಿದೆ.ಹಾವೇರಿ ಹೆಸ್ಕಾಂ ವೃತ್ತದ ವ್ಯಾಪ್ತಿಯಲ್ಲಿ ನವೆಂಬರ್ 11ರಂದು ವಿಶೇಷ ವಿದ್ಯುತ್ ನಿರ್ವಹಣಾಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಈ ಅಭಿಯಾನದಡಿಜಿಲ್ಲೆಯ ವಿವಿಧ ತಾಲೂಕುಗಳಲ್ಲಿನ ವಿದ್ಯುತ್ ಮಾರ್ಗಗಳು, ಪರಿವರ್ತಕಗಳು ಹಾಗೂ ವಿದ್ಯುತ್ ವಿತರಣಾ ವ್ಯವಸ್ಥೆಗಳ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಯಿತು.ಹಾವೇರಿ, ಗುತ್ತಲ, ಅಕ್ಕಿಆಲೂರು, ಬಂಕಾಪುರ, ಹುಲಗೂರು, ನೀರಲಗಿ, ಶಿಗ್ಗಾಂವಿ, ಸವಣೂರು, ಹಾನಗಲ್, ರಾಣೇಬೆನ್ನೂರು–1 (CSD),



ರಾಣೇಬೆನ್ನೂರು–2 (RSD), ಬ್ಯಾಡಗಿ, ಹಿರೇಕೆರೂರು ಹಾಗೂ ರಟ್ಟೀಹಳ್ಳಿ ಸೇರಿದಂತೆ ವಿವಿಧ ಉಪವಿಭಾಗಗಳ ವ್ಯಾಪ್ತಿಯಒಟ್ಟು 42 ವಿದ್ಯುತ್ ಫೀಡರ್‌ಗಳಲ್ಲಿ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ವಿದ್ಯುತ್ ವ್ಯತ್ಯಯ ತಡೆಗೆ ಕ್ರಮ :ವಿದ್ಯುತ್ ಮಾರ್ಗಗಳ ಸುರಕ್ಷತೆ ಮತ್ತುಕಾರ್ಯಕ್ಷಮತೆ ಹೆಚ್ಚಿಸುವ ನಿಟ್ಟಿನಲ್ಲಿ 11 ಕೆ.ವಿ. ವಿದ್ಯುತ್ ಮಾರ್ಗಗಳು ಹಾಗೂ ವಿದ್ಯುತ್ ಪರಿವರ್ತಕಗಳ ನಿರ್ವಹಣೆ, ವಿದ್ಯುತ್ ಮಾರ್ಗಗಳಿಗೆ ಅಡ್ಡಿಯಾಗಿದ್ದ ಮರದ ಕೊಂಬೆಗಳ ತೆರವು, ಹಾಳಾದ ವಿದ್ಯುತ್ ಪರಿಕರಗಳ ಬದಲಾವಣೆ, ವಿದ್ಯುತ್ ಕಂಬಗಳು ಹಾಗೂ ಮಾರ್ಗಗಳ ದುರಸ್ತಿ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಯಿತು.ವಿದ್ಯುತ್ ವಿತರಣಾ ಕೇಂದ್ರಗಳಲ್ಲಿನ ನಿರ್ವಹಣಾ ಕಾರ್ಯಗಳು, ವಿದ್ಯುತ್ ಪರಿವರ್ತಕ ಕೇಂದ್ರಗಳ ಸುಧಾರಣೆ ಹಾಗೂ ತಾಂತ್ರಿಕ ದೋಷಗಳನ್ನು ಸರಿಪಡಿಸುವಕಾರ್ಯಕ್ಕೂಆದ್ಯತೆ ನೀಡಲಾಯಿತು.ಗ್ರಾಮೀಣ ಪ್ರದೇಶಗಳಿಗೂ ಅಭಿಯಾನದ ಪ್ರಯೋಜನ :ಜಿಲ್ಲೆಯ ವಿವಿಧ ಗ್ರಾಮಗಳು ಹಾಗೂ ಪಟ್ಟಣ ಪ್ರದೇಶಗಳಲ್ಲಿನ ವಿದ್ಯುತ್ ಮಾರ್ಗಗಳ ನಿರ್ವಹಣೆಯ ಮೂಲಕ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುವ ಅಡಚಣೆಗಳನ್ನು ಕಡಿಮೆ ಮಾಡಲುಕ್ರಮ ಕೈಗೊಳ್ಳಲಾಗಿದೆ. ರೈತರು, ಸಾರ್ವಜನಿಕರು ಹಾಗೂ ಕೈಗಾರಿಕಾಗ್ರಾಹಕರಿಗೆಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸೇವೆ ಒದಗಿಸುವುದು ಈ ಅಭಿಯಾನದ ಪ್ರಮುಖಉದ್ದೇಶವಾಗಿ

ಪ್ರಮುಖ ಸಂಕ್ಷಿಪ್ತ ಸುದ್ದಿ

ಅಪ್ರಾಪ್ತ ಬಾಲಕಿಯರ ಫೋಟೊ, ವಿಡಿಯೊ ಬಳಸಿ ಬ್ಲ್ಯಾಕ್‌ಮೇಲ್; ವೇಶ್ಯಾವಾಟಿಕೆ ಜಾಲ ಪತ್ತೆ



ಪಾಂಡವ ನ್ಯೂಸ್, ಬಳ್ಳಾರಿ: ಹಣದ ಆಮಿಷವೊಡ್ಡಿ ಮಹಿಳೆಯರು ಹಾಗೂ ಅಪ್ರಾಪ್ತ ಬಾಲಕಿಯರನ್ನು ವೇಶ್ಯಾವಾಟಿಕೆಗೆ ತಳ್ಳುವುದು, ಅಶ್ಲೀಲ ಫೋಟೊ ಮತ್ತು ವಿಡಿಯೊಗಳನ್ನು ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಹಾಗೂ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಜಾಲವನ್ನು ಎಪಿಎಂಸಿ ಠಾಣೆ ಪೊಲೀಸರು ಪತ್ತೆಹಚ್ಚಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ. ಪನ್ನೇಕರ್ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಿಲ್ಲರ್‌ಪೇಟೆಯಲ್ಲಿ ಗೋವಿಂದಮ್ಮ ಸೇರಿದಂತೆ 15ಕ್ಕೂ ಹೆಚ್ಚು ಮಂದಿ ಸಂಘಟಿತರಾಗಿ ಈ ಅಕ್ರಮ ಚಟುವಟಿಕೆ ನಡೆಸುತ್ತಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಹಣದ ಆಮಿಷವೊಡ್ಡಿ ಮಹಿಳೆಯರು ಮತ್ತು ಅಪ್ರಾಪ್ತ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದರು. ಅಪ್ರಾಪ್ತ ಬಾಲಕಿಯರ ಅಶ್ಲೀಲ ಫೋಟೊಗಳನ್ನು ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಹಾಗೂ ವಿಡಿಯೊಗಳನ್ನು ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು ಎಂದು ತಿಳಿಸಿದರು.

ಬೆಂಗಳೂರು, ಅನಂತಪುರ, ವಿಜಯಪುರ ಸೇರಿದಂತೆ ವಿವಿಧೆಡೆ ವೇಶ್ಯಾವಾಟಿಕೆ ಉದ್ದೇಶದಿಂದ ಮಹಿಳೆಯರು ಮತ್ತು ಬಾಲಕಿಯರನ್ನು ಕಳುಹಿಸುತ್ತಿದ್ದರು. ಲಕ್ಷ್ಮೀ ಪೂಜೆಯ ಹೆಸರನ್ನೂ ಬಳಸಿಕೊಂಡು ಅಕ್ರಮ ಚಟುವಟಿಕೆ ನಡೆಸಿರುವುದು ತನಿಖೆಯಲ್ಲಿ ತಿಳಿದುಬಂದಿದೆ ಎಂದರು.

ಈ ಸಂಬಂಧ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 243/2026ರಡಿ ಪ್ರಕರಣ ದಾಖಲಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆ–2023ರ ವಿವಿಧ ಕಲಂಗಳು, ಅನೈತಿಕ ಮಾನವ ಸಾಗಣೆ ತಡೆ ಕಾಯ್ದೆ, ಪೋಕ್ಸೊ ಕಾಯ್ದೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಗೋವಿಂದಮ್ಮ, ನಾಗರಾಜ, ರಾಜು, ಎ. ನಾರಣಸ್ವಾಮಿ, ಈರಮ್ಮ, ಮಹಮ್ಮದ್, ವಿನೋದಬಾಯಿ, ರಾಚಯ್ಯ, ಸೌಸಿಯಾ, ಗಂಗಾಧರ, ಅನ್ವರ್, ಉಸ್ಮಾನ್, ರಾಹುಲ್, ಅಲಿಬ್ಬೆ, ಅಶ್ರಫ್ ಹಾಗೂ ಬಾಬುರಾವ್ ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮೂರು ಭಾಗವಾಗಿ ಹಣ ಹಂಚಿಕೆ : ಅಕ್ರಮ ದಂಧೆಯಿಂದ ಬಂದ ಹಣವನ್ನು ಮೂರು ಭಾಗಗಳಾಗಿ ಹಂಚಿಕೊಳ್ಳುತ್ತಿದ್ದರು. ಒಂದು ಭಾಗ ಸ್ವಾಮಿಗೆ, ಮತ್ತೊಂದು ಭಾಗ ಸಂತ್ರಸ್ತರಿಗೆ ಹಾಗೂ ಮೂರನೇ ಭಾಗವನ್ನು ಆರೋಪಿಗಳು ಪಡೆಯುತ್ತಿದ್ದರು. ದಂಧೆ ನಡೆಸಲು ಕೋಡ್‌ವರ್ಡ್‌ಗಳನ್ನು ಬಳಸುತ್ತಿದ್ದರು. ಸಂತ್ರಸ್ತ ಮಹಿಳೆಯರನ್ನು 'ಪೇಪರ್' ಹಾಗೂ ಸ್ವಾಮಿಯನ್ನು 'ಡಿ.ಆರ್.' ಎಂದು ಗುರುತಿಸುತ್ತಿದ್ದರು.

ಸಂತ್ರಸ್ತರ ವಿವಿಧ ಭಂಗಿಗಳ ಫೋಟೊ ಮತ್ತು ವಿಡಿಯೊಗಳನ್ನು ಯಾರಿಗೆ ಕಳುಹಿಸುತ್ತಿದ್ದರು ಹಾಗೂ ಅವುಗಳನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬ ಬಗ್ಗೆ ತನಿಖೆ ಮುಂದುವರಿದಿದೆ ಎಂದು ತಿಳಿಸಿದರು.

ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಉಳಿದ ನಾಲ್ವರು ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ಮುಂದುವರಿದಿದೆ. ಸಂತ್ರಸ್ತರ ರಕ್ಷಣೆ ಮತ್ತು ಪ್ರಕರಣದ ಇತರ ಆಯಾಮಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದರು.

ಪೊಲೀಸ್ ಅಧೀಕ್ಷಕರು ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಗೋವಿಂದರಾಜು, ಪಿಐ ಮಹಮ್ಮದ್ ರಫಿ, ಪಿಎಸ್‌ಐ ಸುಪ್ರೀತ್, ವಲಿಭಾಷ, ಎಸ್‌ಜೆಪಿಯು ಘಟಕದ ಸಿಬ್ಬಂದಿ, ಅಕ್ಕಪಡೆ ಸಿಬ್ಬಂದಿ ಹಾಗೂ ಎಪಿಎಂಸಿ ಠಾಣೆಯ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ತಂಡದ ಕಾರ್ಯವನ್ನು ಎಸ್ಪಿ ಶ್ಲಾಘಿಸಿದರು.

ನ. 16 ರಂದು ನೇರ ಸಂದರ್ಶನ

ಪಾಂಡವ ನ್ಯೂಸ್, ಬಳ್ಳಾರಿ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಯೋಗದೊಂದಿಗೆ ಜಾಯಲು ಕ್ಯಾಸ್ಜ್ಯುವೆಲ್ಲರ್ಸ್ ಸಂಸ್ಥೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಸೇಲ್ಸ್‌ಎಕ್ಸಿಕ್ಯೂಟಿವ್, ಎಕ್ಸಿಕ್ಯೂಟಿವ್ ಸಿಆರ್‌ಎಂ, ಡ್ರೈವರ್‌ಹಾಗೂ ಆಫೀಸ್ ಬಾಯ್ ಸೇರಿದಂತೆ ಒಟ್ಟು 40ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಇಬ್ಬರಿಗೂ ಈ ಸಂದರ್ಶನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ನವೆಂಬರ್ 16 ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2ಗಂಟೆಯವರೆಗೆ ನಗರದ ಹಳೆ ತಾಲೂಕು ಆಫೀಸ್ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ನಡೆಯಲಿದೆ.ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ರೀತಿಯ ಶುಲ್ಕವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆಗಳಾದ 7619207762, 6360408094, 7676427793 ಗೆ ಸಂಪರ್ಕಿಸಬಹುದಾಗಿದೆ.

ಸಂದರ್ಶನದಲ್ಲಿ ಭಾಗವಹಿಸುವ ಆಸಕ್ತ ಅಭ್ಯರ್ಥಿಗಳು ತಮ್ಮ ಆಧಾರ್‌ಕಾರ್ಡ್ ಪ್ರತಿ ಹಾಗೂ ಸ್ವ–ವಿವರ ಜೊತೆಗೆ ನೇರವಾಗಿ ಮೇಲ್ಕಂಡ ಸ್ಥಳದಲ್ಲಿ ಹಾಜರಾಗಿ ಈ ಅವಕಾಶದ ಸದುಪಯೋಗಪಡಿಸಿಕೊಳ್ಳುವಂತೆ ಜಿಲ್ಲಾ ಉದ್ಯೋಗಾಧಿಕಾರಿಗಳು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಪಾಂಡವ ನ್ಯೂಸ್, ಗದಗ : ಗಜೇಂದ್ರಗಡ ತಾಲೂಕಿನ ಸ್ಥಿರಾಸ್ತಿಗಳ ಬೆಲೆಯನ್ನು 2026–27 ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ , ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳು 2013 ರ ನಿಯಮ 6 (1) ರ ಪ್ರಕಾರ 2026–27 ನೇ ಸಾಲಿಗೆ ಪರಿಷ್ಕರಿಸಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕರಡು ಪ್ರತಿಯನ್ನು ಉಪನೋಂದಣಿ ಅಧಿಕಾರಿಗಳ ಕಚೇರಿ, ಗಜೇಂದ್ರಗಡ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಈ ಕುರಿತು ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳಿದ್ದಲ್ಲಿ ಸಂಬಂಧಪಟ್ಟವರು ಸೂಕ್ತ ದಾಖಲೆಗಳೊಂದಿಗೆ ನವೆಂಬರ್ 28 ರೊಳಗಾಗಿ ನರಗುಂದ ಉಪನೋಂದಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ಗಜೇಂದ್ರಗಡ ಉಪನೋಂದಣಾಧಿಕಾರಿಗಳ ಕಚೇರಿ ಪ್ರಕಟಣೆಗೆ ತಿಳಿಸಿದೆ.

ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಸಹಕಾರಿ : ಜಿ.ಪಂ. ಸಿಇಒ ಭುವನೇಶ ಪಾಟೀಲ

ಪಾಂಡವ ನ್ಯೂಸ್, ಹುಬ್ಬಳ್ಳಿ : ಪೊಲೀಸರು ಸದಾ ಒತ್ತಡದಲ್ಲಿ ಕೆಲಸ ನಿರ್ವಹಿಸುತ್ತಾರೆ. ಒತ್ತಡ ಕಡಿಮೆ ಮಾಡಲು ಕ್ರೀಡೆಗಳು ಅತ್ಯವಶ್ಯಕವಾಗಿವೆ. ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆಗಳು ಸಹಕಾರಿಯಾಗಲಿವೆ ಎಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಹೇಳಿದರು.

ಗೋಕುಲ ರಸ್ತೆಯ ನಗರ ಸಶಸ್ತ್ರ ಮೀಸಲು ಪಡೆಯಕ ವಾಯತ ಮೈದಾನದಲ್ಲಿ ಪೋಲಿಸ್ ಆಯುಕ್ತಾಲಯ ಹುಬ್ಬಳ್ಳಿ ಧಾರವಾಡ ನಗರ ವತಿಯಿಂದ ಆಯೋಜಿಸಿದ್ದ ಪೊಲೀಸ್ ವಾರ್ಷಿಕ ಕ್ರೀಡಾಕೂಟವನ್ನು ತ್ರಿವರ್ಣದ ಬಲೂನ್ ಗಳನ್ನು ಹಾರಿ ಬಿಡುವ ಮೂಲಕ ಉದ್ಘಾಟಿಸಿ, ಅವರು ಮಾತನಾಡಿದರು.

ಪೊಲೀಸರು ಪ್ರತಿನಿತ್ಯವೂ ಸೇವೆಯಲ್ಲಿ ಇರಬೇಕಾಗುತ್ತದೆ. ಅಪರಾಧಗಳ ತಡೆ, ಕಾನೂನು ಸುವ್ಯವಸ್ಥೆ, ಬಂದೋಬಸ್ತ್ ಸೇರಿದಂತೆ ವಿವಿಧ ಕೆಲಸದಲ್ಲಿ ಪೊಲೀಸರು ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪೊಲೀಸರು ಕಾರ್ಯನಿರ್ವಹಿಸಲು ಯಾವುದೇ ನಿಗದಿತ ಸಮಯವಿರುವುದಿಲ್ಲ.

ಪೊಲೀಸರು ಒತ್ತಡದಲ್ಲೇ ಕಾರ್ಯನಿರ್ವಹಿಸುವರು. ಕರ್ತವ್ಯದ ನಡುವೆಯೂ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸಿಕೊಳ್ಳಲು ಕ್ರೀಡಾಕೂಟ ಬಹಳ ಅತ್ಯವಶ್ಯಕ. ಪ್ರತಿಯೊಬ್ಬರೂ ಕ್ರೀಡಾಕೂಟದಲ್ಲಿ ಸ್ಪರ್ಧಾ



ಮನೋಭಾವದ ಜೊತೆಗೆತಂಡವಾಗಿ ಆಡಬೇಕು. ಕ್ರೀಡಾ ಚಟುವಟಿಕೆಗಳಿಂದ ನಾಯಕತ್ವ ಗುಣವನ್ನು ಬೆಳೆಸಿಕೊಳ್ಳಬಹುದು. ಒಗ್ಗಟ್ಟು ಪ್ರದರ್ಶನಕ್ಕೆ ಕ್ರೀಡೆಗಳು ಬೇಕಾಗುತ್ತವೆ ಎಂದು ಅವರು ತಿಳಿಸಿದರು.

ಪೊಲೀಸ್ ಕ್ರೀಡಾಕೂಟವನ್ನು ಎಲ್ಲಾ ಜಿಲ್ಲೆಗಳಲ್ಲಿ ನಿರಂತರವಾಗಿ ಆಯೋಜಿಸಲಾಗುತ್ತದೆ. ಅತೀಉತ್ಸಾಹ, ಧೈರ್ಯದಿಂದ ಎಲ್ಲರೂ ಭಾಗವಹಿಸುತ್ತಾರೆ.

ಈ ಹಿಂದೆ ಎರಡು ದಿನಗಳ ಕಾಲ ಪೊಲೀಸ್ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿತ್ತು.

ಈ ಬಾರಿ ಮೂರು ದಿನಗಳ ಕಾಲ ಕ್ರೀಡಾಕೂಟ ನಡೆಯುತ್ತಿರುವುದು ಸಂತಸದ ವಿಷಯ. ಪುರುಷ ಸಿಬ್ಬಂದಿಗಳಂತೆ

ಮಹಿಳಾ ಸಿಬ್ಬಂದಿಗಳು ಸಹ ಕ್ರೀಡೆಗಳಲ್ಲಿ ಭಾಗವಹಿಸಲು ಮುಂದಾಗಬೇಕು.

ದಿನನಿತ್ಯ ಜೀವನದಲಿ ್ಲಯೋಗಾಭ್ಯಾಸವನ್ನು ಅಳವಡಿಸಿಕೊಳ್ಳಬೇಕು. ಚಿಕ್ಕ ಮಕ್ಕಳಿಗೂ ಸಹ ಮುಂದೆ ಜೀವನದಲ್ಲಿ ಪೊಲೀಸ್ ಆಗಬೇಕು ಎಂದು ಕನಸು ಕಂಡಿರುತ್ತಾರೆ. ನಾನು ಕೂಡ ಪೊಲೀಸ್ ಆಗಬೇಕು ಎಂದು ಕನಸು ಕಂಡಿದ್ದೆ ಎಂದು ಅವರು ನುಡಿದರು.

ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತರಾದ ಬೊರಸೆ ಭೂಷಣ ಗುಲಾಬರಾವ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಪೊಲೀಸರ ಕೆಲಸ ಬಹಳ ಒತ್ತಡದ ಕೆಲಸವಾಗಿದೆ. ಪ್ರತಿಯೊಬ್ಬರೂ ದೈಹಿಕ ಮತ್ತು ಮಾನಸಿಕವಾಗಿ ಸದೃಢವಾಗಿರಬೇಕು. ಮೂರು ದಿನಗಳ ಕಾಲ ಕ್ರೀಡಾಕೂಟ ನಡೆಯಲಿದೆ. ಪ್ರತಿಯೊಬ್ಬರೂ ಕ್ರೀಡಾ ಮನೋಭಾವದಿಂದ ಕ್ರೀಡಾಕೂಟದಲ್ಲಿ ಭಾಗಿಯಾಗಬೇಕು. ಜೀವನದಲ್ಲಿ ಸೋಲು ಗೆಲುವು ಇರುವುದು ಸಹಜ. ಗೆಲುವು ಸಿಗುವವರೆಗೂ ಸತತ ಪ್ರಯತ್ನ ಮಾಡಬೇಕು. ಪೊಲೀಸ್ ವಾರ್ಷಿಕ ಕ್ರೀಡಾಕೂಟವನ್ನು ಯಶಸ್ವಿಗೊಳಿಸೋಣ ಎಂದು ಅವರು ತಿಳಿಸಿದರು.

ಪರೇಡ ಕಮಾಂಡರ್ ನಾಗರಾಜ ಪಾಟೀಲ ನೇತೃತ್ವದಲ್ಲಿ ಉತ್ತರ ವಿಭಾಗ, ದಕ್ಷಿಣ ವಿಭಾಗ, ಮಹಿಳಾ ವಿಭಾಗ, ಸಿ.ಎ.ಆರ್ ವಿಭಾಗ, ಸಂಚಾರ ವಿಭಾಗ ಮತ್ತು ಧಾರವಾಡ ವಿಭಾಗ ತಂಡಗಳು ಆಕರ್ಷಕ ಪಥ ಸಂಚಲನ ನಡೆಸಿದವು. ಮೂರು ಬಾರಿ ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ಪಡೆದ ಆರ್. ವೆಂಕಟೇಶ ನಾಯಕ್ ಅವರು ಕ್ರೀಡಾ ಜ್ಯೋತಿ ಬೆಳಗಿಸಿದರು.

ಕಾರ್ಯಕ್ರಮದಲ್ಲಿ ಡಿಸಿಪಿ ವಿಜಯ ಕುಮಾರ ತಳವಾರ, ಎಸಿಪಿಗಳಾದ ಯು.ಬಿ. ಚಿಕ್ಕಮಠ, ಶಿವಪ್ರಕಾಶ ನಾಯಕ, ಪೊಲೀಸ ಇಲಾಖೆಯ ಅಧಿಕಾರಿಗಳು, ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ಕುಟುಂಬಸ್ಥರು, ಸಾರ್ವಜನಿಕರು ಇತರರು ಭಾಗವಹಿಸಿದ್ದರು.

ನಿಖಿಲ್ ನಾಯಕ ಮತ್ತು ಪೂರ್ಣಿಮಾ ಕುಂಬಾರ ಅವರು ನಿರೂಪಿಸಿದರು. ಡಿಸಿಪಿ ಶ್ರುತಿ ಎನ್.ಎಸ್ ವಂದಿಸಿದರು.

ಚೆಕ್‌ಡ್ಯಾಮ್ ನಿರ್ಮಾಣದಿಂದ ಅಂತರ್ಜಲ ವೃದ್ಧಿ, ರೈತರ ಕೃಷಿಗೆ ಹೆಚ್ಚಿನ ಅನುಕೂಲ: ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ

ಪಾಂಡವ ನ್ಯೂಸ್, ಚಿತ್ರದುರ್ಗ : ರೈತ ನೆಮ್ಮದಿಯಿಂದಇದ್ದಾಗ ಮಾತ್ರ ನಾಡು ಸಮೃದ್ಧಿಯಾಗಿರಲು ಸಾಧ್ಯ. ರೈತರ ಬದುಕು ಹಸನಾಗಬೇಕಾದರೆ ಕೃಷಿಗೆ ಅಗತ್ಯವಾದ ನೀರಿನ ಲಭ್ಯತೆ ಹೆಚ್ಚಾಗಬೇಕು ಹಾಗೂ ಅಂತರ್ಜಲ ಮಟ್ಟ ಸುಧಾರಣೆಯಾಗಬೇಕು. ಈ ಉದ್ದೇಶದಿಂದ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸುವ ಮೂಲಕ ಮಳೆನೀರಿನ ಸಂರಕ್ಷಣೆ ಮತ್ತು ಅಂತರ್ಜಲ ವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆಎಂದು ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ತಿಳಿಸಿದರು.

ತಾಲೂಕಿನ ಜೋಡಿ ಚಿಕ್ಕೇನಹಳ್ಳಿ ಮತ್ತು ದೇವಪುರದಹಟ್ಟಿ ಗ್ರಾಮಗಳಲ್ಲಿನ ಹಳ್ಳಗಳಿಗೆ ಗುರುವಾರ ಸುಮಾರು 4.52 ಲಕ್ಷರೂ. ವೆಚ್ಚದಲ್ಲಿ ಚೆಕ್‌ಡ್ಯಾಮ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಚಿತ್ರದುರ್ಗ ಜಿಲ್ಲೆ ಅರೆಬಯಲು ಪ್ರದೇಶವಾಗಿದ್ದು, ಮಳೆಯ ಪ್ರಮಾಣ ಮತ್ತು ನೀರಿನ ಲಭ್ಯತೆ ಕೃಷಿ ಚಟುವಟಿಕೆಗಳ ಮೇಲೆ ನೇರ ಪರಿಣಾಮ ಬೀರುತ್ತದೆ.

ಮಳೆಗಾಲದಲ್ಲಿ ಹಳ್ಳ–ಕೊಳ್ಳಗಳ ಮೂಲಕ ಹೆಚ್ಚಿನ ಪ್ರಮಾಣದ ನೀರು ಹರಿದು ಹೋಗಿ ವ್ಯರ್ಥವಾಗುತ್ತದೆ. ಇಂತಹ ನೀರನ್ನುಚೆಕ್ ಡ್ಯಾಮ್‌ಗಳ ಮೂಲಕ ತಡೆದು ಸಂಗ್ರಹಿಸುವುದರಿಂದ ಭೂಮಿಯೊಳಗೆ ನೀರು ಇಂಗಲು ಅವಕಾಶ ದೊರೆಯುತ್ತದೆ. ಇದರಿಂದ ಸುತ್ತಮುತ್ತಲಿನ ಪ್ರದೇಶಗಳ ಅಂತರ್ಜಲ ಮಟ್ಟ ಸುಧಾರಿಸಲು ಸಹಕಾರಿಯಾಗಲಿದೆ ಎಂದರು.

ಚೆಕ್‌ಡ್ಯಾಮ್ ನಿರ್ಮಾಣದಿಂದ ಸುತ್ತಮುತ್ತಲಿನ ರೈತರ ಕೊಳವೆಬಾವಿ, ತೆರೆದ ಬಾವಿಗಳಲ್ಲಿ ನೀರಿನ ಮರುಪೂರಣಕ್ಕೆ ಅನುಕೂಲವಾಗುತ್ತದೆ. ಕೃಷಿ ಜಮೀನುಗಳಲ್ಲಿ ತೇವಾಂಶ ಕಾಪಾಡಿಕೊಳ್ಳಲು ಹಾಗೂ ಬೆಳೆಗಳಿಗೆ ಅಗತ್ಯವಾದ ನೀರಿನ ಲಭ್ಯತೆ ಸುಧಾರಿಸಲು ನೆರವಾಗುತ್ತದೆ. ವಿಶೇಷವಾಗಿ ಮಳೆ ಆಶ್ರಿತ ಕೃಷಿ ಮಾಡುವ ರೈತರಿಗೆ ಇಂತಹ ಕಾಮಗಾರಿಗಳು ಹೆಚ್ಚಿನ ಪ್ರಯೋಜನ ನೀಡಲಿವೆ. ಬೇಸಿಗೆಯ ಸಂದರ್ಭದಲ್ಲಿ ಎದುರಾಗುವ ನೀರಿನ ಸಮಸ್ಯೆಯನ್ನು ಕಡಿಮೆ ಮಾಡುವುದಕ್ಕೂ ಚೆಕ್‌ಡ್ಯಾಮ್‌ಗಳು ಸಹಕಾರಿಯಾಗಲಿವೆ ಎಂದು ಹೇಳಿದರು.

ಗ್ರಾಮೀಣ ಭಾಗದ ಅಭಿವೃದ್ಧಿಯಲ್ಲಿ ನೀರಿನ ಸಂರಕ್ಷಣೆ ಪ್ರಮುಖ ಪಾತ್ರ ವಹಿಸುತ್ತದೆ. ಕೇವಲ ಹೊಸ ಕೆರೆಗಳನ್ನು ನಿರ್ಮಿಸುವುದಷ್ಟೇ ಅಲ್ಲದೆ, ಈಗಿರುವಕೆರೆ, ಕಟ್ಟೆ, ಹಳ್ಳ ಹಾಗೂ ಜಲಮೂಲಗಳನ್ನು ಸಂರಕ್ಷಿಸುವುದುಕೂಡ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಮಳೆನೀರು ಎಲ್ಲಿ ಬೀಳುತ್ತದೆಯೋ ಅಲ್ಲಿಯೇ ಸಾಧ್ಯವಾದಷ್ಟು ಸಂಗ್ರಹಿಸಿ ಭೂಮಿಗೆ ಇಂಗಿಸುವ ಕಾರ್ಯಕ್ಕೆಒತ್ತು ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆಯ ಮೂಲಕ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಜಲಸಂರಕ್ಷಣಾ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಚಿಕ್ಕಡ್ಯಾಮ್‌ಗಳ ನಿರ್ಮಾಣ ಮಾಡಲಾಗುತ್ತಿದೆ ಹಾಗಾಗಿ ಕಾಮಗಾರಿ ಸಂಪೂರ್ಣ ಗುಣಮಟ್ಟದಿಂದ ಕೂಡಿರಬೇಕು, ಕಳಪೆ ಕಾಮಗಾರಿ ಮಾಡುವ ವಿಚಾರ ಗಮನಕ್ಕೆ ಬಂದಲ್ಲಿತಮ್ಮ



ಮೇಲೆ ಶಿಸ್ತು ಕ್ರಮ ಜರುಗಿಸಲಾಗುತ್ತದೆ ಎಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.

ಸಣ್ಣ ನೀರಾವರಿ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಭೀಮರಾಜ್ ಮಾತನಾಡಿ, ಜಲಸಂರಕ್ಷಣಾ ಕಾಮಗಾರಿಗಳು ಕೇವಲ ಒಂದುಗ್ರಾಮದ ಅಭಿವೃದ್ಧಿಗೆ ಸೀಮಿತವಾಗದೆ ಸುತ್ತಮುತ್ತಲಿನ ಪ್ರದೇಶಗಳಿಗೂ ಪ್ರಯೋಜನ ನೀಡುತ್ತವೆ. ಮಳೆನೀರನ್ನು ಸಂಗ್ರಹಿಸಿ ಅಂತರ್ಜಲ ಮರುಪೂರಣ ಮಾಡುವುದರಿಂದ ಕೃಷಿ ಮತ್ತು ಗ್ರಾಮೀಣ ಜನಜೀವನಕ್ಕೆ ಅನುಕೂಲವಾಗುತ್ತದೆ. ಚೆಕ್ ಡ್ಯಾಮ್‌ಗಳ ನಿರ್ಮಾಣದ ಜೊತೆಗೆ ಈಗಾಗಲೇ ನಿರ್ಮಿಸಿರು

45 ಸಾವಿರ ಸರ್ಕಾರಿ ಶಾಲೆಗಳ ಮುಚ್ಚುವಿಕೆಗೆ ವಿರೋಧಿಸಿ ಪ್ರತಿಭಟನೆ

ಎಡಿಬಿ ಷರತ್ತಿಗೆ ಸಹಿ ಹಾಕಿದ ರಾಜ್ಯ ಸರ್ಕಾರ; ಶಿಕ್ಷಣ ವ್ಯವಸ್ಥೆಯ ಮಾರಣಹೋಮಕ್ಕೆ ಮುನ್ನುಡಿ: ಕೆ.ಈರಣ್ಣ



ಪಾಂಡವ ನ್ಯೂಸ್, ಚಿತ್ರದುರ್ಗ: ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಹೆಸರಿನಲ್ಲಿ ರಾಜ್ಯದ 45 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ, ಸರ್ಕಾರದ ನೀತಿ ಖಂಡಿಸಿ ಎಐಡಿಎಸ್ಒ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ತಾಲೂಕಿನ ಗಂಜಿಗಟ್ಟಿ ಗ್ರಾಮದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಮಾತನಾಡಿದ ಎಐಡಿಎಸ್ಒ ಜಿಲ್ಲಾ ಸಂಚಾಲಕ ಕೆ.ಈರಣ್ಣ, ಅಧಿಕಾರಕ್ಕೆ ಬಂದರೆ ಸರ್ಕಾರಿ ಶಾಲೆಗಳನ್ನು ಉಳಿಸುವುದಾಗಿ ಭರವಸೆ ನೀಡಿದ್ದ ಕಾಂಗ್ರೆಸ್ ಸರ್ಕಾರವೇ ಇದೀಗ ಸರ್ಕಾರಿ ಶಾಲೆಗಳನ್ನು ಮುಚ್ಚುವ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಮೂಲಕ ರಾಜ್ಯದ 45 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಿ, ಎನ್ಇಪಿ–2020 ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಪಡೆದ ಸಾಲದ ಒಪ್ಪಂದದಲ್ಲಿಯೂ ಈ ಕುರಿತು ಷರತ್ತುಗಳಿವೆ. ಇದು ರಾಜ್ಯದ ಬಡ ಮತ್ತು ಗ್ರಾಮೀಣ ಮಕ್ಕಳ ಶಿಕ್ಷಣದ ಹಕ್ಕಿಗೆ ಧಕ್ಕೆ ತರುವ ನೀತಿಯಾಗಿದೆ ಎಂದು ಟೀಕಿಸಿದರು.

ದೇಶಾದ್ಯಂತ ಪ್ರಜಾಪ್ರಭುತ್ವ ಉಳಿಸುವ ಮಾತುಗಳನ್ನಾಡುವ ಕಾಂಗ್ರೆಸ್ ನಾಯಕರು, ರಾಜ್ಯದಲ್ಲಿ ಬಡವರ ಮಕ್ಕಳು ಓದುವ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿರುವುದು ಯಾವ ಪ್ರಜಾಪ್ರಭುತ್ವದ ರಕ್ಷಣೆ ಎಂದು ಪ್ರಶ್ನಿಸಿದರು.

ಎಡಿಬಿ ಷರತ್ತುಗಳೇನು? : ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಷರತ್ತುಗಳ ಪ್ರಕಾರ, 2030ರ ವೇಳೆಗೆ ಕ್ಲಸ್ಟರ್ ವ್ಯಾಪ್ತಿಯ ಸರ್ಕಾರಿ ಶಾಲೆಗಳನ್ನು ಒಂದೇ ಕಡೆ ವಿಲೀನಗೊಳಿಸುವ ಉದ್ದೇಶವಿದೆ. ಶಾಲೆಗಳ ನಿರ್ವಹಣೆಗೆ ಕಾರ್ಪೊರೇಟ್ ಕಂಪನಿಗಳಿಂದ ಆರ್ಥಿಕ ನೆರವು ಪಡೆದು, ಅವುಗಳ ಉದ್ಯೋಗ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕ ಪಠ್ಯಕ್ರಮ ರೂಪಿಸುವ ಯೋಜನೆಯಿದೆ. ಮುಂದಿನ ಶಿಕ್ಷಕರ ನೇಮಕಾತಿ ಕೆಪಿಎಸ್ ಶಾಲೆಗಳಿಗೆ ಮಾತ್ರ ಸೀಮಿತವಾಗುವ ಸಾಧ್ಯತೆಯಿದ್ದು, 2030ರ ನಂತರ ಈ ಶಾಲೆಗಳಿಗೆ ಸರ್ಕಾರ ಅನುದಾನ ನೀಡಬಾರದು ಎಂಬ ಷರತ್ತೂ ಇದೆ ಎಂದು ವಿವರಿಸಿದರು.

ಈ ನೀತಿ ಜಾರಿಯಾದರೆ ರಾಜ್ಯದಲ್ಲಿ ಕೇವಲ 4,038 ಶಾಲೆಗಳು ಉಳಿದು, ಸುಮಾರು 45 ಸಾವಿರ ಸರ್ಕಾರಿ ಶಾಲೆಗಳು ಮುಚ್ಚುವ ಅಪಾಯವಿದೆ. ರಾಜ್ಯದ ಶಿಕ್ಷಣ ನೀತಿಯನ್ನು ಶಿಕ್ಷಣ ತಜ್ಞರು ನಿರ್ಧರಿಸುವ ಬದಲು ವಿದೇಶಿ ಬ್ಯಾಂಕ್ ಹಾಗೂ ಕಾರ್ಪೊರೇಟ್ ಕಂಪನಿಗಳು ನಿರ್ಧರಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜನ್ಮವಾರ್ಷಿಕೋತ್ಸವದ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಉಳಿಸುವ ಹೋಣೆಗಾರಿಕೆ ಎಲ್ಲರ ಮೇಲಿದೆ. ಸರ್ಕಾರಿ ಶಾಲೆಗಳ ಉಳಿವಿಗಾಗಿ ಜನಪರ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಅಧ್ಯಕ್ಷ ಮಂಜಣ್ಣ, ಉಪಾಧ್ಯಕ್ಷ ನಾಗರಾಜ, ನಾಗವೇಣಿ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸ್ಥಳೀಯ ಉತ್ಪನ್ನಗಳ ಅಂತರರಾಷ್ಟ್ರೀಯ ರಫ್ತಿಗೆ ಉದ್ಯಮದಾರರು ಮುಂದಾಗಿ: ಮಹಾಂತೇಶ್ ಕಂಚಿಮಠ



ಪಾಂಡವ ನ್ಯೂಸ್, ವಿಜಯನಗರ (ಹೊಸಪೇಟೆ) : ಜವಳಿ ಮತ್ತು ಕೈಮಗ್ಗ ಕ್ಷೇತ್ರದ ಉದ್ಯಮದಾರರು ಸ್ಥಳೀಯವಾಗಿ ಉತ್ಪಾದಿಸುವ ಗುಣಮಟ್ಟದ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ರಫ್ತು ಮಾಡುವ ಮೂಲಕ ಉದ್ಯಮದ ಬೆಳವಣಿಗೆ ಹಾಗೂ ದೇಶದ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಬೇಕು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕ ಮಹಾಂತೇಶ್ ಕೆ.ಜಿ. ಕಂಚಿಮಠ ಕರೆ ನೀಡಿದರು.

ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ ಜವಳಿ ಹಾಗೂ ಕೈಮಗ್ಗ ವಲಯದ ಉದ್ಯಮದಾರರು, ನೇಕಾರರು ಮತ್ತು ಉದ್ದಿಮೆದಾರರಿಗಾಗಿ ಗುರುವಾರ ನಗರದ ನೆಹರು ಕಾಲೋನಿಯ ಬಲ್ಡೋಟ ಪಾರ್ಕ್ ಎದುರಿನ ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ ಭವನದಲ್ಲಿ ಒಂದು ದಿನದ 'ರಫ್ತು ಪ್ರೋತ್ಸಾಹನ ಕಾರ್ಯಾಗಾರ' ಉದ್ಘಾಟಿಸಿ ಅವರು ಮಾತನಾಡಿದರು.

ವಿಜಯನಗರಜಿಲ್ಲೆಯಲ್ಲಿ ಕೈಮಗ್ಗ, ಜವಳಿ ಹಾಗೂ ಸಿದ್ಧ ಉಡುಪು ಉದ್ಯಮಗಳ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಸ್ಥಳೀಯ ಉದ್ಯಮದಾರರು ಸಾಂಪ್ರದಾಯಿಕ ಉತ್ಪಾದನೆಯ ಜೊತೆಗೆ ರಫ್ತು ವಹಿವಾಟಿನತ್ತಲೂ ಹೆಚ್ಚಿನ ಆಸಕ್ತಿ ವಹಿಸಬೇಕು. ಸರ್ಕಾರದ ವಿವಿಧ ಯೋಜನೆಗಳು, ಸೌಲಭ್ಯಗಳು ಮತ್ತು ಸಹಾಯಧನಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಉದ್ಯಮಗಳನ್ನು ವಿಸ್ತರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಲಬುರಗಿ ಉತ್ತರ ವಲಯದ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕ ಬಿ. ವಿಠಲರಾಜು ಅವರು ಮಾತನಾಡಿ, ಜವಳಿ ಕ್ಷೇತ್ರದಲ್ಲಿರಫ್ತು ವಹಿವಾಟು ಹೆಚ್ಚಿಸಲು ಉತ್ಪನ್ನಗಳ ಗುಣಮಟ್ಟ ಕಾಪಾಡುವುದು ಅತ್ಯಗತ್ಯ. ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದರೊಂದಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆ, ಗ್ರಾಹಕರ ಅಭಿರುಚಿ ಹಾಗೂ ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಉತ್ಪಾದನೆ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್ ಬಂಕದ್ ಅವರು ಮಾತನಾಡಿ, ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ವಿವಿಧ ಇಲಾಖೆಗಳ ಮೂಲಕ ದೊರೆಯುವ ಸೌಲಭ್ಯಗಳು, ಪ್ರೋತ್ಸಾಹಕ ಯೋಜನೆಗಳು ಹಾಗೂ ಉದ್ಯಮದಾರರು ಅವುಗಳನ್ನು ಪಡೆದುಕೊಳ್ಳುವ ವಿಧಾನಗಳ ಕುರಿತು ಮಾಹಿತಿ ನೀಡಿದರು.ಹೊಸಪೇಟೆ ಕೈಮಗ್ಗ ನೇಕಾರರ ಸಹಕಾರ ಸಂಘದ ಮಾಜಿ ಕಾರ್ಯದರ್ಶಿ ಹಾಗೂ ಉದ್ಯಮದಾರ ಮಲ್ಲಿಕಾರ್ಜುನ ಕೆ. ಅವರು ಮಾತನಾಡಿ, ಕಾರ್ಯಾಗಾರದಲ್ಲಿ ದೊರೆತ ಮಾಹಿತಿಯನ್ನು ಉದ್ಯಮದಾರರು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಬೇಕು. ಆರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ರಫ್ತು ವಹಿವಾಟು ಪ್ರಾರಂಭಿಸಿ, ಅನುಭವ ಮತ್ತು ಮಾರುಕಟ್ಟೆ ಸಂಪರ್ಕ ಹೆಚ್ಚಾದಂತೆ ಉದ್ಯಮವನ್ನು ವಿಸ್ತರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಾಗಾರದಲ್ಲಿ ಅಂಚೆ ಇಲಾಖೆಯ ಹೆಡ್ ಪೋಸ್ಟ್ ಮಾಸ್ಟರ್ ಮಂಜುನಾಥ ಕೆ. ಹಾಗೂ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಎಸ್. ಮಲ್ಲಾನಾಯ್ಕ, ಡಿಬಿಎಸ್ ಬ್ಯಾಂಕ್‌ಇಂಡಿಯಾ ಲಿಮಿಟೆಡ್‌ನ ಹೊಸಪೇಟೆ ಶಾಖೆಯ ವ್ಯವಸ್ಥಾಪಕ ಸಂಗಪ್ಪ ಕಂಬಳಿ, ಎಲ್. ಪ್ರವೀಣರಾಜ ನಾಯಕ, ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಮಂಜುಳ ಇದ್ದರು.

ಕೆಪಿಎಸ್ಸಿ ಪರೀಕ್ಷೆಗೆ ಜಿಲ್ಲಾಡಳಿತ ಸಜ್ಜು : ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಮಾಹಿತಿ



ಪಾಂಡವ ನ್ಯೂಸ್, ಬಳ್ಳಾರಿ : ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಬಳ್ಳಾರಿ ನಗರದಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ ನವೆಂಬರ್ 15 ರಂದುಗೆಜೆಟೆಡ್ ಪ್ರೊಬೇಷನರ್ಸ್‌ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಯು ನಡೆಯಲಿದ್ದು, ಜಿಲ್ಲಾಡಳಿತದಿಂದ ಸಕಲ– ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಇದೇ ನ.15 ರಂದು ನಡೆಯಲಿರುವ ಕೆಪಿಎಸ್ಸಿ ಯಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವ ಸಿದ್ಧತೆಗಳ ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಈ ಪರೀಕ್ಷೆಗೆ ಬಳ್ಳಾರಿ ಜಿಲ್ಲೆಯಲ್ಲಿಒಟ್ಟು 12,004 ಅಭ್ಯರ್ಥಿಗಳು ಹಾಜರಾಗಲಿದ್ದಾರೆ. ಪರೀಕ್ಷೆಯು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ಜರುಗಲು ಜಿಲ್ಲಾ ಆಡಳಿತದಿಂದ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ವಸತಿ ಹಾಗೂ ಪ್ರಯಾಣ ವ್ಯವಸ್ಥೆ: ಪರೀಕ್ಷೆಗೆ ಹೊರಗಿನಿಂದ ಆಗಮಿಸುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ನವೆಂಬರ್ 14 ರಂದು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಹಿಳಾ ಅಭ್ಯರ್ಥಿಗಳಿಗೆ ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರ, ಜಿಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು, ಕೌಲ್ ಬಜಾರ್, ಬಳ್ಳಾರಿ. (ನೋಡಲ್ ಅಧಿಕಾರಿ: ನಾಗೇಶ್, ಪ್ರಾದೇಶಿಕ ನಿರ್ದೇಶಕರು – ಮೊ: 9986696487).

ಪುರುಷ ಅಭ್ಯರ್ಥಿಗಳಿಗೆ ಬಾಬು ಜಗಜೀವನ್‌ರಾಮ್ ಭವನ, ರಂಗಮಂದಿರರಸ್ತೆ, ಕೌಲ್ ಬಜಾರ್, ಬಳ್ಳಾರಿ. (ನೋಡಲ್‌ಅಧಿಕಾರಿ: ಚಿದಾನಂದಪ್ಪ, ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ – ಮೊ: 9480843073) ಇಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಅದೇ ರೀತಿಯಾಗಿ ಕೆಕೆಆರ್‌ಟಿಸಿ ವತಿಯಿಂದ ವಿವಿಧ ಸ್ಥಳಗಳಿಂದ ಪರೀಕ್ಷಾ ಕೇಂದ್ರಗಳಿಗೆ ಅಭ್ಯರ್ಥಿಗಳು ನಿಗದಿತ ಸಮಯಕ್ಕೆ ತಲುಪಲು ಕಾಲಕಾಲಕ್ಕೆ ಹೆಚ್ಚುವರಿ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದರು.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಅತ್ಯಾವಶ್ಯಕ ಮೂಲಭೂತ ಸೌಕರ್ಯಗಳನ್ನು ಕಡ್ಡಾಯವಾಗಿ ವ್ಯವಸ್ಥೆಗೊಳಿಸಲಾಗಿದೆ. ವಿದ್ಯುತ್ ವ್ಯತ್ಯಯವಾಗದಂತೆ ಮುಂಜಾಗ್ರತಾ ಕ್ರಮವಾಗಿ ಜನರೇಟರ್ ವ್ಯವಸ್ಥೆಯನ್ನೂ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ಆವರಣವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಜೆರಾಕ್ಸ್ ಸೆಂಟರ್ ಹಾಗೂ ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಆದೇಶಿಸಲಾಗಿದೆ ಎಂದು ಹೇಳಿದರು. ನಿಗಾ ಮತ್ತು ಭದ್ರತೆ : ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ, ಫ್ರಿಸ್ಕಿಂಗ್, ಫೇಸ್‌ರೆಕಾಗ್ನಿಷನ್ ಮತ್ತುಜಾಮರ್‌ಗಳ ಮುಂತಾದ ಅತ್ಯಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳ ಒಳಗೆ ಮತ್ತು ಹೊರಗೆ 24/7 ಸಿಸಿಟಿವಿ ಅಳವಡಿಸಲಾಗಿದ್ದು, ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಜಿಪಂ ಕಚೇರಿಯಲ್ಲಿರುವ ಎನ್‌ಐಸಿ ಮೂಲಕ ನೇರ ಪ್ರಸಾರ ಮಾಡಲಾಗುತ್ತದೆ. ಪ್ರತಿಕೇಂದ್ರಕ್ಕೆ ನಾಲ್ವರು ನೋಡಲ್ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಯನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಶ್ರವಣ ಅಥವಾ ಇತರೆ ಆರೋಗ್ಯ ಸಮಸ್ಯೆಇರುವ ಅಭ್ಯರ್ಥಿಗಳಿಗಾಗಿ ಪ್ಯಾರಾಮೆಡಿಕಲ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಸೂಕ್ತ ಪೊಲೀಸ್ ಭದ್ರತಾ ವ್ಯವಸ್ಥೆಕೂಡ ಕೈಗೊಳ್ಳಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಎರಡುಗಂಟೆ ಮುಂಚಿತವಾಗಿ ಹಾಜರಾಗಬೇಕು. ತಮ್ಮ ಪ್ರವೇಶ ಪತ್ರ ಹಾಗೂ ಭಾವಚಿತ್ರವಿರುವ ಗುರುತಿನಚೀಟಿ (ಆಧಾರ್‌ಕಾರ್ಡ್ / ಚುನಾವಣಾ ಗುರುತಿನ ಚೀಟಿ) ಕಡ್ಡಾಯವಾಗಿ ತರಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆಅವರು ತಿಳಿಸಿದರು.

ಅಭ್ಯರ್ಥಿಗಳು ಪೂರ್ಣ ತೋಳಿನ ಬಟ್ಟೆಗಳನ್ನು ಹಾಗೂ ಹೆಚ್ಚು ಪಾಕೆಟ್‌ಗಳಿರುವ ಉಡುಪುಗಳನ್ನು ಧರಿಸಿ ಬರುವುದನ್ನು ನಿಷೇಧಿಸಲಾಗಿದೆ. ಪಾದರಕ್ಷೆಗಳ ವಿಚಾರದಲ್ಲಿ ಶೂ ಧರಿಸಿದ್ದರೆ ಅವುಗಳನ್ನು ಕಳಚಿ ಪರಿಶೀಲಿಸಲಾಗುವುದು, ಹಾಗೂ ಸಾಮಾನ್ಯಚಪ್ಪಲಿ ಧರಿಸಲು ಅವಕಾಶ ನೀಡಲಾಗಿದೆ. ಅದೇ ರೀತಿಯಾಗಿ ಸ್ಮಾರ್ಟ್‌ವಾಚ್‌ಗಳು, ಬ್ಲೂಟೂತ್ ಸಾಧನಗಳು, ಇಯರಿಂಗ್ ಬಡ್‌ಗಳು ಸೇರಿದಂತೆ ಯಾವುದೇ ರೀತಿಯ ವಿದ್ಯುತ್ ಅಥವಾ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೇಂದ್ರದೊಳಗೆ ಕೊಂಡೊಯ್ಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡುವುದನ್ನು ತಡೆಯಲು ಜಿಲ್ಲಾದ್ಯಂತ 100ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳಿಂದ ನಿಗಾ ಇರಿಸಲಾಗಿದ್ದು, ತಪ್ಪು ಸಂದೇಶ ಹರಡುವವರ ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಪೊಲೀಸ್ ಭದ್ರತೆ ಮತ್ತು ಸಿಬ್ಬಂದಿ ನಿಯೋಜನೆ : ಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ ಭದ್ರತೆಗಾಗಿ 13 ಜನ ಇನ್ಸ್‌ಪೆಕ್ಟರ್‌ಗಳು, 20 ಪಿಎಸ್‌ಐಗಳು, 250 ಹೆಚ್‌ಸಿ/ಪಿಸಿ ಸಿಬ್ಬಂದಿ ಹಾಗೂ 150 ಹೋಮ್‌ಗಾರ್ಡ್‌ಗಳನ್ನು ನೇಮಿಸಲಾಗಿದೆ. ಮೇಲ್ವಿಚಾರಣೆಗಾಗಿ ಇಬ್ಬರು ಡಿವೈಎಸ್‌ಪಿಗಳನ್ನು ನಿಯೋಜಿಸಲಾಗಿದ್ದು, ಖುದ್ದು ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ ಎಂದರು. ಈ ವೇಳೆ ಅಪರಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್ ಇದ್ದರು.

ಕರ್ನಾಟಕ ಸರಕಾರ
ನಗರಸಭೆ ಕಾರ್ಯಾಲಯ, ಹಾವೇರಿ ಜಿಲ್ಲಾ: ಹಾವೇರಿ
CITY MUNICIPAL COUNCIL HAVERI
ವೆಬ್ ಸೈಟ್: www.havericity.mrc.gov.in
ದೂರವಾಣಿ ಕಚೇರಿ: 08375–232444 ಸಹಾಯವಾಣಿ: 080–23108108
ಇ–ಮೇಲ್: itstaff_ulb_haveri@yahoo.com

ಕ್ರ.ಸ:ನಸಹಾ/ತಾ.ವಿ/ಆ.ವಿ/ವಹಿ22/2026–27 ದಿನಾಂಕ: 12–11–2026

"ಮರು ಸಾರ್ವಜನಿಕ ಪ್ರಕಟಣೆ"

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನಂದರೆ, ಹಾವೇರಿ ನಗರಸಭೆ ವ್ಯಾಪ್ತಿಯಲ್ಲಿ ಸ್ವಂತ ಮಾಲ್ಕಿ ಖಾಸಗಿ ಜಮೀನನ್ನು ಹೊಂದಿ ಮಾರಾಟ ಮಾಡಲು ಇಚ್ಛೈವುಳ್ಳವರು ನಗರಸಭೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೇರ ಪಾವತಿ ಪೌರಕಾರ್ಮಿಕರಿಗೆ ಹಾಗೂ ಇತರೇ ಸ್ವಚ್ಛತಾ ಕಾರ್ಮಿಕರಿಗೆ ನಿವೇಶನ, ಮನೆ ನಿರ್ಮಾಣ ಹಾಗೂ ಬಡಾವಣೆ ಮಾಡಲು ಕನಿಷ್ಠ **2** ರಿಂದ **5** ಎಕರೆ ಖಾಸಗಿ ಜಮೀನನ್ನು ಮಾರಾಟ ಮಾಡುವವರು ಪಹಣಿ ಪತ್ರಿಕೆ ಮತ್ತು ಸೂಕ್ತ ದಾಖಲಾತಿಗಳೊಂದಿಗೆ **ದಿನಾಂಕ: 19–11–2026 ರ** ಒಳಗಾಗಿ ನಗರಸಭೆಗೆ ಅರ್ಜಿ ಸಲ್ಲಿಸಲು ಕೋರಿದೆ.

ಸಹಿ/–
ಪೌರಾಯುಕ್ತರು
ನಗರಸಭೆ ಹಾವೇರಿ

ವಾ.ಸಾ.ಸಂ.ಇ/ಹಾವೇರಿ/413/ದೇಶಪಾಂಡೆಪಬ್ಲಿಸಿಟಿ/2026–27

ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನಲ್ಲಿ ಕಾನೂನು ಅರಿವು–ನೆರವು ಕಾರ್ಯಕ್ರಮ



ಪಾಂಡವ ನ್ಯೂಸ್, ಚಿತ್ರದುರ್ಗ : ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಮಾದಕ ದ್ರವ್ಯ ಮುಕ್ತ ಭಾರತಕ್ಕಾಗಿ ಜಾಗೃತಿ ಮತ್ತು ಸ್ವಾಸ್ಥ್ಯ ಮಾರ್ಗದರ

ಮಕ್ಕಳಿಗೆ ಗೆಲುವಷ್ಟೇ ಅಲ್ಲ, ಸೋಲನ್ನೂ ಕಲಿಸಿ!



ಮಕ್ಕಳು ಗೆದ್ದಾಗ ಸಂಭ್ರಮಿಸುವ ನಾವು, ಅವರು ಸೋತಾಗಲೂ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತೇವೆಯೇ? ಸೋಲು ಎದುರಾದಾಗ ಧೈರ್ಯ ತುಂಬುವ ಬದಲು ಮತ್ತಷ್ಟು ಒತ್ತಡ ಹೇರುತ್ತಿದ್ದೇವೆಯೇ? ಇಂದಿನ ಪೋಷಕರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಪ್ರಶ್ನೆಗಳಿವು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರತಿಯೊಬ್ಬ ಪೋಷಕರಿಗೂ ತಮ್ಮ ಮಕ್ಕಳು ಎಲ್ಲದರಲ್ಲೂ ಮುಂದಿರಬೇಕು, ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಬೇಕು, ಸ್ಪರ್ಧೆಗಳಲ್ಲಿ ಗೆಲ್ಲಬೇಕು ಎಂಬ ಬಯಕೆ ಸಹಜ. ಆದರೆ ಈ ಬಯಕೆಯೇ ಮಕ್ಕಳ ಮೇಲೆ ಒತ್ತಡವಾಗಿ ಪರಿಣಮಿಸುತ್ತಿರುವುದು ಆತಂಕಕಾರಿ ಸಂಗತಿ. ಮಕ್ಕಳಿಗೆ ಗೆಲ್ಲುವುದನ್ನು ಕಲಿಸುವ ಭರದಲ್ಲಿ ಸೋಲನ್ನು ಸ್ವೀಕರಿಸುವುದನ್ನೇ ಕಲಿಸಲು ಮರೆಯುತ್ತಿದ್ದೇವೆ.

'ಸೋಲೆಂದು ವಿಜ್ಞಾನಿ ಸುಮ್ಮನಿದ್ದರೆ ಸಿಗುತ್ತಿತ್ತೆ ವಿದ್ಯುತ್ತು, ಟಿವಿ, ಟೆಲಿಫೋನು? ಇರಲಿ ಸಾವಿರ ಸೋಲು, ಕೊನೆಗೆ ವಿಜಯದ ಸೆರೆ; ಸೋಲು ಗೆಲುವಿನ ಮೆಟ್ಟಿಲು' ಎಂಬ ಕೆ.ಸಿ. ಶಿವಪ್ಪನವರ ಸಾಲುಗಳು ಜೀವನದ ಮಹತ್ವದ ಸತ್ಯವನ್ನು ಸಾರುತ್ತವೆ. ವಿಜ್ಞಾನಿಗಳ ನಿರಂತರ ಪ್ರಯತ್ನ, ಸೋಲುಗಳಿಂದ ಕಲಿತ ಪಾಠಗಳೇ ಜಗತ್ತಿನ ಅನೇಕ ಆವಿಷ್ಕಾರಗಳಿಗೆ ದಾರಿಯಾಗಿವೆ. ಹಾಗಿರುವಾಗ ಮಕ್ಕಳು ಮಾತ್ರ ಸೋಲಬಾರದು ಎಂಬ ನಿರೀಕ್ಷೆ ಏಕೆ?

ಸೋಲು ಅಂತ್ಯವಲ್ಲ, ಆರಂಭ! : ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ, ಕ್ರೀಡೆಯಲ್ಲಿ ಸೋತರೆ ಅಥವಾ ಸ್ಪರ್ಧೆಯಲ್ಲಿ ಬಹುಮಾನ ಸಿಗದಿದ್ದರೆ ಮಕ್ಕಳು ಕುಗ್ಗುವುದು ಸಹಜ. ಆದರೆ ಆ ಸೋಲನ್ನೇ ಜೀವನದ ಅಂತ್ಯವೆಂದು ಭಾವಿಸುವ ಸ್ಥಿತಿ ನಿರ್ಮಾಣವಾಗಬಾರದು. ಸೋಲು ಗೆಲುವಿನ ಮೊದಲ ಹೆಜ್ಜೆ ಎಂಬ ಅರಿವು ಬಾಲ್ಯದಲ್ಲಿಯೇ ಮೂಡಬೇಕು.

ಇತ್ತೀಚಿನ ದಿನಗಳಲ್ಲಿ ಸಣ್ಣಪುಟ್ಟ ವೈಫಲ್ಯಗಳಿಗೂ ಮಕ್ಕಳು ತೀವ್ರ ನಿರಾಶೆಗೆ ಒಳಗಾಗುತ್ತಿರುವುದು ಕಳವಳಕಾರಿ. ಕೆಲವು ಸಂದರ್ಭಗಳಲ್ಲಿ ಆತ್ಮಹತ್ಯೆಯಂತಹ ದುರಂತ ನಿರ್ಧಾರಗಳಿಗೂ ಮುಂದಾಗುತ್ತಿರುವುದು ಸಮಾಜವನ್ನು ಬೆಚ್ಚಿಬೀಳಿಸಿದೆ. ಇದಕ್ಕೆ ಮಕ್ಕಳನ್ನು ಮಾತ್ರ ಹೊಣೆ ಮಾಡಲಾಗದು. ಅವರ ಮನಸ್ಥಿತಿ ರೂಪಿಸುವಲ್ಲಿ ಕುಟುಂಬ, ಶಿಕ್ಷಣ ವ್ಯವಸ್ಥೆ ಮತ್ತು ಸಮಾಜದ ಪಾತ್ರವೂ ಇದೆ.

ಅತಿಯಾದ ಮುದ್ದು ಮಾರಕವಾಗದಿರಲಿ! : ಮಕ್ಕಳಿಗೆ ಕೇಳಿದ್ದನ್ನೆಲ್ಲ ಕೊಡಿಸುವುದು, ಯಾವುದೇ ನೋವು ಎದುರಾಗದಂತೆ ನೋಡಿಕೊಳ್ಳುವುದು, ಎಲ್ಲ ಸಂದರ್ಭದಲ್ಲೂ ಅವರ ಪರ ನಿಲ್ಲುವುದು ಪೋಷಕರ ಪ್ರೀತಿಯ ಅಭಿವ್ಯಕ್ತಿಯಾಗಿರಬಹುದು. ಆದರೆ ಜೀವನದಲ್ಲಿ ಎಲ್ಲವೂ ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ ಎಂಬ ವಾಸ್ತವವನ್ನು ಮಕ್ಕಳಿಗೆ ತಿಳಿಸದಿದ್ದರೆ, ಭವಿಷ್ಯದ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಅವರಲ್ಲಿ ಬೆಳೆಯುವುದಾದರೂ ಹೇಗೆ?

ಬಾಲ್ಯದಲ್ಲಿ ಸಣ್ಣಪುಟ್ಟ ನಿರಾಸೆಗಳನ್ನು ಎದುರಿಸಲು ಅವಕಾಶವಿಲ್ಲದ ಮಕ್ಕಳು, ಉನ್ನತ ಶಿಕ್ಷಣಕ್ಕಾಗಿ ದೊಡ್ಡ ನಗರಗಳಿಗೆ ಹೋದಾಗ ಹೊಸ ಪರಿಸರ, ಸ್ಪರ್ಧೆ, ಒತ್ತಡ ಹಾಗೂ ಸವಾಲುಗಳನ್ನು ಎದುರಿಸಲು ಪರದಾಡಬಹುದು. ಅಲ್ಲಿ ಎದುರಾಗುವ ಅವಮಾನ, ವೈಫಲ್ಯ ಮತ್ತು ನಿರಾಸೆಗಳನ್ನು ಸಹಿಸಿಕೊಳ್ಳುವ ಮಾನಸಿಕ ಶಕ್ತಿ ಅವರಲ್ಲಿರಬೇಕು. ಅದನ್ನು ಬೆಳೆಸುವ ಜವಾಬ್ದಾರಿ ಪೋಷಕರ ಮೇಲಿದೆ.

ಪೋಷಕರು–ಶಿಕ್ಷಕರು ಕೈಜೋಡಿಸಲಿ : ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಪೋಷಕರಷ್ಟೇ ಶಿಕ್ಷಕರ ಪಾತ್ರವೂ ಮಹತ್ವದ್ದು. ಮಗು ತಪ್ಪು ಮಾಡಿದಾಗ ತಿದ್ದಬೇಕು. ಆದರೆ ಇತರ ಮಕ್ಕಳೊಂದಿಗೆ ಹೋಲಿಕೆ ಮಾಡುವುದು, ಎಲ್ಲರ ಮುಂದೆ ಅವಮಾನಿಸುವುದು ಅಥವಾ ಅಂಕಗಳಿಗಾಗಿ ಒತ್ತಡ ಹೇರುವುದು ಸರಿಯಲ್ಲ.

ಮಕ್ಕಳ ಭಾವನೆಗಳನ್ನು ಅರ್ಥಮಾಡಿಕೊಂಡು ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸವಾಗಬೇಕು.

ಮಗುವಿನ ಬೆಳವಣಿಗೆ ತ್ರಿಕೋನದಂತಿರಬೇಕು. ಒಂದು ಬದಿಯಲ್ಲಿ ಮಗು, ಮತ್ತೊಂದು ಬದಿಯಲ್ಲಿ ಪೋಷಕರು, ಇನ್ನೊಂದು ಬದಿಯಲ್ಲಿ ಶಿಕ್ಷಕರು ಇರಬೇಕು. ಈ ಮೂರು ಶಕ್ತಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಮಗುವಿನ ಭವಿಷ್ಯ ಭದ್ರವಾಗಲು ಸಾಧ್ಯ. ತಪ್ಪುಗಳನ್ನು ಪರಸ್ಪರರ ಮೇಲೆ ಹೊರಿಸುವ ಬದಲು ಮಕ್ಕಳ ಹಿತಕ್ಕಾಗಿ ಒಟ್ಟಾಗಿ ಶ್ರಮಿಸಬೇಕು.

ಅಂಕಗಳೇ ಜೀವನವಲ್ಲ! : ಮಕ್ಕಳಿಗೆ ಉತ್ತಮ ಅಂಕ ಗಳಿಸುವುದಷ್ಟೇ ಶಿಕ್ಷಣವಲ್ಲ; ಬದುಕಿನ ಸವಾಲುಗಳನ್ನು ಎದುರಿಸುವುದೂ ಶಿಕ್ಷಣವೇ. ಗೆದ್ದಾಗ ಅಹಂಕಾರ ಪಡದಿರುವುದು, ಸೋತಾಗ ಧೃತಿಗೆಡದಿರುವುದು, ತಪ್ಪಾದಾಗ ತಿದ್ದಿಕೊಳ್ಳುವುದು, ಮತ್ತೆ ಪ್ರಯತ್ನಿಸುವ ಛಲ ಬೆಳೆಸಿಕೊಳ್ಳುವುದು ನಿಜವಾದ ಶಿಕ್ಷಣದ ಭಾಗವಾಗಬೇಕು.

ಮಕ್ಕಳಿಗೆ ಗೆಲುವಿನ ಸಂಭ್ರಮವನ್ನು ಮಾತ್ರ ಪರಿಚಯಿಸಬೇಡಿ. ಸೋಲಿನ ಪಾಠವನ್ನೂ ಕಲಿಸಿ. ಸೋತಾಗ ಅವಮಾನಿಸದೆ, ಮತ್ತೆ ಪ್ರಯತ್ನಿಸಲು ಪ್ರೇರೇಪಿಸಿ. ಏಕೆಂದರೆ ನಾಳಿನ ಸಮಾಜದ ನಿರ್ಮಾತೃಗಳಾಗಬೇಕಿರುವ ಇಂದಿನ ಮಕ್ಕಳಿಗೆ ಅಂಕಗಳಿಗಿಂತ ಆತ್ಮವಿಶ್ವಾಸ, ಸ್ಪರ್ಧೆಗಿಂತ ಮಾನವೀಯತೆ, ಗೆಲುವಿಗಿಂತ ಜೀವನದ ಮೌಲ್ಯಗಳು ಮುಖ್ಯ.

ಬನ್ನಿ, ಮಕ್ಕಳನ್ನು ಗೆಲುವಿಗೆ ಸಿದ್ಧಪಡಿಸುವುದರ ಜೊತೆಗೆ ಸೋಲನ್ನು ಎದುರಿಸುವ ಶಕ್ತಿಯನ್ನೂ ನೀಡೋಣ. ಆಗ ಮಾತ್ರ ಅವರು ಬದುಕಿನ ಪ್ರತಿಯೊಂದು ಸವಾಲನ್ನೂ ಧೈರ್ಯದಿಂದ ಎದುರಿಸಬಲ್ಲರು.

ಎಲ್ಲ ಮುದ್ದು ಮಕ್ಕಳಿಗೂ ಮಕ್ಕಳ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ಲಕ್ಷ್ಮೀ ಎಚ್. ಬಲ್ಲೂರ

ಸಮಯ ಪ್ರಜ್ಞೆ



'ಕಳೆದ ನಿನ್ನೆ ಕತ್ತಲು, ಬರುವ ನಾಳೆ ಬೆತ್ತಲು ಯಾವ ಗುರಿ ಏನು ಗೊತ್ತು?ಈ ಹೊತ್ತು ನಮ್ಮ ಹೊತ್ತು, ಈ ಹೊತ್ತು ಎನ್ನುವುದೇ ಸಮಯ. ಬಸವಣ್ಣನವರು ಹೊತ್ತು ಹೋಗದ ಮುನ್ನ ತೊತ್ತು ಕೆಲಸವ ಮಾಡು ಕೂಡಲ ಸಂಗಮ ದೇವನ' ಎಂದಿದ್ದಾರೆ. 'ಹೊತ್ತು ಹೋದ ಬಳಿಕ ನಿನ್ನನ್ಯಾರು' ಬಲ್ಲರು? ಎಂದು ಕೇಳಿದ್ದಾರೆ. ಹೊತ್ತು ಅಥವಾ ಸಮಯದ ಬೆಲೆಗೆ ಈ ಮಾತುಗಳೇ ಸಾಕು.

ನಮ್ಮ ಬದುಕಿಗೆ ಒಂದು ಶಿಸ್ತು ಬೇಕಾದರೆ, ಬದುಕು ಸಾರ್ಥಕವಾಗಬೇಕಾದರೆ ನಾವು ಮೊದಲು ಈ ಸಮಯದ ಬೆಲೆಯನ್ನು ಅರಿತುಕೊಳ್ಳಬೇಕು. ಸಮಯ ಒಂದು ಜೀವನ ಸಂವಿಧಾನ. ಅದಕ್ಕೆ ನಾವು ಬದ್ಧರಾಗಿರಬೇಕು. ಅದೇ ಸಮಯ ಪ್ರಜ್ಞೆಎಂದರೆ ನಾವು ಮಾಡಬೇಕಾದುದನ್ನು ಮಾಡಬೇಕಾದ ಸಮಯದಲ್ಲಿ ಮಾಡಬೇಕು. ತರಗತಿಗೆ ಹೋಗುವ ವಿದ್ಯಾರ್ಥಿಯಿರಲಿ, ಕಚೇರಿಗೆ ಹೋಗುವ ನೌಕರನಿರಲಿ, ಕಾರ್ಖಾನೆಗೆ ಹೋಗುವ ಕಾರ್ಮಿಕನಿರಲಿ, ಸಮಾರಂಭಗಳಿಗೆ ಹೋಗುವ ಅತಿಥಿಯಿರಲಿ, ಬಸ್ಸು, ರೈಲು, ವಿಮಾನಗಳಿಗೆ ಹೋಗಬೇಕಾದ ಪ್ರಯಾಣಿಕರನಿರಲಿ, ಸಮಯ ತಪ್ಪಿದರೆ ಏನಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ.

ಈ ಜಗತ್ತಿನಲ್ಲಿ ಅತ್ಯಂತ ಅಮೂಲ್ಯವಾದದ್ದು ತಿರುಗಿ ಸಂಪಾದಿಸಲು ಅಸಾಧ್ಯವಾದದ್ದು. ಅನ್ನುವಂತಹ ವಸ್ತುವೊಂದಿದ್ದರೆ ಅದುವೇ ಕಾಲ. ಮಾನವ ಇಂದು ಮರಣವನ್ನಾದರೂ ತಡೆಹಿಡಿಯಬಲ್ಲ, ಆದರೆ ಕಾಲವನ್ನು ಮಾತ್ರ ತಡೆ ಹಿಡಿಯಲಾರ. ಜಗತ್ತಿನ ಅತ್ಯಂತ ಮೇಧಾವಿಗಳಾಗಲಿ, ಶಕ್ತಿವಂತರಾಗಲಿ, ಹಣವಂತರಾಗಲಿ ಕಳೆದುಹೋದ ಒಂದು ಸೆಕೆಂಡನ್ನು ಮರಳಿ ತರುವುದು ಸಾಧ್ಯವಿಲ್ಲ.

ಕಾಲ ಎಲ್ಲ ಶಕ್ತಿಗಳನ್ನು ಮೀರಿದ್ದು. ಅದಕ್ಕೆ ಎದುರಿಲ್ಲ, ಸಾಟಿಯೂ ಇಲ್ಲ. ಮಾನವ ಅಮೂಲ್ಯ ಬಂಗಾರ ಬೆಳ್ಳಿಗಳಿಗೆ ಹಾತೊರೆಯುತ್ತಾರೆ. ಅಂಥ ಅಪೇಕ್ಷಿತ ವಸ್ತು ಕಳೆದುಹೋದರು ಮರಳಿ ತರಬಹುದು. ಆದರೆ ಕಳೆದುಹೋದ ಹೊತ್ತು ಮತ್ತೆ ತರುವುದು ಸಾಧ್ಯವಿಲ್ಲ.

Time and tide waits for none. ¤d ಕಾಲ ಮತ್ತು ಪ್ರವಾಹ ಯಾರಿಗಾಗಿಯೂ ಯಾವುದಕ್ಕಾಗಿಯೂ ಕಾಯುತ್ತಿರುವುದಿಲ್ಲ. ತಮ್ಮ ಪಾಡಿಗೆ ತಾವು ಮುಂದೆ ಮುಂದೆ ಸಾಗುತ್ತಿರುತ್ತವೆ.

ಪ್ರವಾಹ ಇರುವಾಗಲೇ ಅಡೆತಡೆಯೊಡ್ಡಿ ನೀರು ವ್ಯರ್ಥವಾಗದಂತೆ ಸಂಗ್ರಹಿಸಿಟ್ಟರೆ ಮುಂದೆ ಬೇಕಾದಾಗ ಬಳಸಿಕೊಳ್ಳಬಹುದು. ಅಂತೆಯೇ ಕಾಲವನ್ನು ವ್ಯರ್ಥ ಮಾಡದೆ ಜತನವಾಗಿ ಬಳಸಿದರೆ ಸಂಗ್ರಹವಾದ ಜ್ಞಾನವನ್ನು ಬಳಸಿ ಬೆಳೆಯಬಹುದು.

ಸಮಯ ಪ್ರಜ್ಞೆಜೀವನ ಶಿಸ್ತು.ಜಗತ್ತಿನ ಅನೇಕ ಪ್ರಸಿದ್ಧರು ಕಾಲಕ್ಕೆ ಎಷ್ಟು ಮಹತ್ವ ಕೊಡುತ್ತಿದ್ದರು ಎನ್ನುವುದಕ್ಕೆ ನೂರಾರು ಉದಾಹರಣೆಗಳಿವೆ. ಆದರೆ ನಮ್ಮಲ್ಲಿ ಬಹುತೇಕರಲ್ಲಿ ಈ ಸಮಯ ಪ್ರಜ್ಞೆ ಕಂಡುಬರುವುದಿಲ್ಲ. ಕೆಲವರಿಗಂತೂ ತಡವಾಗಿ ಬಂದು ಕಾರ್ಯಕ್ರಮ ಮುಗಿಯುವ ಮುನ್ನವೇ ಹೋಗುವುದು ಒಂದು ಪ್ರತಿಷ್ಠೆಯಾಗಿರುವಂತೆ ಕಾಣುತ್ತದೆ. ನಮ್ಮಲ್ಲಿ ನಡೆಯುವ ಎಷ್ಟೋ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸಮಯ ಪಾಲನೆ ಇಲ್ಲದೆ ಎಂತಹ ಮುಜುಗರ ಉಂಟುಮಾಡುತ್ತದೆ ಎಂಬುದು ಬಹುತೇಕ ಎಲ್ಲರ ಅನುಭವಕ್ಕೂ ಬಂದ ಸಂಗತಿ. ಉದ್ಘಾಟನೆಗೆ ಬರಬೇಕಾಗಿದ್ದು ಸಮಾರೋಪ ವೇಳೆಗೂ



ತಡವಾಗಿ ಬರುವ ಮಹನೀಯರಿಗೆ ನಮ್ಮಲ್ಲಿ ಕೊರತೆ ಇಲ್ಲ. ಪ್ರತಿಯೊಂದಕ್ಕೂ ಪಾಶ್ಚಾತ್ಯರ ಕಡೆ ಮುಖ ಮಾಡುವ ನಾವು ಅವರ ಕಾಲ ನಿಷ್ಠೆಯನ್ನು ಮಾತ್ರಕಲಿಯಲಿಲ್ಲವಲ್ಲಾ. ಎಂದು ಬೇಸರವಾಗುತ್ತದೆ.

ಒಮ್ಮೆ ಸರ್ ಎಂ ವಿಶ್ವೇಶ್ವರಯ್ಯನವರು ಸಂದರ್ಶಕರೊಬ್ಬರು ಕಾಣಲು ಬಂದಾಗ ನಾಳೆ ಬೆಳಿಗ್ಗೆ 9:30ಕ್ಕೆ ಬನ್ನಿ ಎಂದರಂತೆ. ಆ ವ್ಯಕ್ತಿ ಮರುದಿನ 5 ನಿಮಿಷ ತಡವಾಗಿ ಅಂದರೆ 9:35ಕ್ಕೆ ಬಂದಾಗ ವಿಶ್ವೇಶ್ವರಯ್ಯನವರು ದಯವಿಟ್ಟು ಕ್ಷಮಿಸಿ, ಈಗ ನನಗೆ ಬೇರೆ ಕೆಲಸವಿದೆ ಎಂದು ಬಿಟ್ಟರಂತೆ. ಅದು ಅವರ ವೇಳೆಗೆ ಕೊಡುತ್ತಿದ್ದ ಮಹತ್ವ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಾವು ನಮ್ಮ ಸಮಯವನ್ನು ನಾನಾ ವಿಧಗಳಲ್ಲಿ ಪೋಲು ಮಾಡುತ್ತಿದ್ದೇವೆ. ಇದಕ್ಕೆ ಬುದ್ಧಿ ಜೀವಿಗಳೆನಿಸಿಕೊಂಡವರು, ಸಾಹಿತಿಗಳೂ ಹೊರತಾಗಿಲ್ಲವೆನ್ನುವುದು ನಗ್ನ ಸತ್ಯ.

ಕಾರ್ಯಕ್ರಮಗಳಲ್ಲಿ ವೇದಿಕೆಯ ಮೇಲಿದ್ದವರೆಲ್ಲ ಹೇಳಿದ್ದನ್ನೇ ಹೇಳುತ್ತಾ ಅತಿಥಿಗಳ ಮುಖಸ್ತುತಿಯಲ್ಲಿ ಸಮಯ ಹಾಳು ಮಾಡುವುದು ಸಲ್ಲ. ಇದರಿಂದ ಅನಾವಶ್ಯಕವಾಗಿ ಸಭಿಕರ ಸಹನೆಯನ್ನು ಪರೀಕ್ಷಿಸಿದಂತಾಗುತ್ತದೆ. ನಮ್ಮ ದೇಶದಲ್ಲಿ ದಿನನಿತ್ಯ ನಡೆಯುವ ಸನ್ಮಾನ ಸಮಾರಂಭಗಳು, ಬಹುಶಃ ಬೇರಾವ ದೇಶದಲ್ಲೂ ನಡೆಯುವುದಿಲ್ಲ. ಕೆಲವರಿಗೆ ಸನ್ಮಾನ ಮಾಡಿಸಿಕೊಳ್ಳುವುದು ಡೌಲಾದರೆ ಮತ್ತೆ ಕೆಲವರಿಗೆ ಸನ್ಮಾನ ಮಾಡಿ ಪ್ರಭಾವಿಗಳ ಕೃಪಾ ಕಟಾಕ್ಷ ದಕ್ಕಿಸಿಕೊಳ್ಳುವ ಚಪಲ.

ಅನುಸರಣೀಯ ಆದರ್ಶ : ರಷ್ಯಾದಲ್ಲಿ ಹಿಂದೊಮ್ಮೆ ಅದರ ಅಧ್ಯಕ್ಷರು ನಿಧನರಾದಾಗ ಜನರಾರು ಕೆಲಸ ನಿಲ್ಲಿಸಲಿಲ್ಲ. ಬದಲಾಗಿ ಕಾರ್ಮಿಕರು, ನೌಕರರು, ವಿದ್ಯಾರ್ಥಿ, ಅಧ್ಯಾಪಕರು ತಾವಿದ್ದಡೆಯಲ್ಲಿಯೇ 5 ನಿಮಿಷ ಮೌನ ಆಚರಿಸಿ ಅಗಲಿದ ಆತ್ಮಕ್ಕೆ ಶಾಂತಿ ಕೋರಿದರು. ಯಥಾ ಪ್ರಕಾರ ಕೆಲಸ ಮುಂದುವರಿಸಿದರು. ಅದೇ ನಿಜವಾದ ಶ್ರದ್ಧಾಂಜಲಿ. ಅದರಿಂದಲೇ ರಷ್ಯಾ ಇಂದು ಜಗತ್ತಿನ ಸೂಪರ್ ಪವರ್ ರಾಷ್ಟ್ರವಾಗಿದೆ. ಅದೇ ನಮ್ಮಲ್ಲಿ ನೇತಾರರಾದರೂ ನಿಧನರಾದರೆ ಸಾಕು, ಈಗ ಮೇಲಿನಿಂದ ರಜಾ ಆದೇಶ ಬರುತ್ತದೆ. ಬರಲೇಬೇಕು ಎಂಬ ನಿರೀಕ್ಷೆಯಲ್ಲಿಯೇ ಕೆಲಸ ನಿಂತು ಬಿಡುತ್ತದೆ.

ಜಪಾನಿಯರ ಮುಷ್ಕರ ನಮಗೆ ಅನುಸರಣೀಯವಾಗಬೇಕು. ನಮ್ಮಲ್ಲಿ ಪೆನ್‌ಡೌನ್, ಟೂಲ್‌ಡೌನ್, ವರ್ಕ್‌ಟು ರೂಲ್ ಮುಷ್ಕರಗಳು ಇಲ್ಲಿ ನಡೆಯುವುದಿಲ್ಲ. ಪ್ರತಿಭಟನೆಯ ಕುರುಹಾಗಿ ಕಪ್ಪು ಪಟ್ಟಿಕಟ್ಟಿಕೊಂಡು ದಿನಕ್ಕಿಂತ ಒಂದು ಗಂಟೆ ಹೆಚ್ಚಾಗಿಯೇ ಕೆಲಸ ಮಾಡುತ್ತಾರೆ.

ಕಾರಣ ಅವರ ಕಾಲ ಪ್ರಜ್ಞೆ ಮತ್ತು ರಾಷ್ಟ್ರಪ್ರೇಮ. ತಮ್ಮ ತೊಂದರೆ ಏನೇ ಇರಲಿ ಅದರಿಂದ ರಾಷ್ಟ್ರೀಯ ಪ್ರಗತಿಗೆ ಅಡ್ಡಿಯಾಗಬಾರದು; ಒಂದು ದಿನ ಉತ್ಪಾದನೆ ನಿಂತರೆ ಅಷ್ಟರ ಮಟ್ಟಿಗೆ ನಮ್ಮ ದೇಶ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಿಂದೆ ಬೀಳುತ್ತದೆ ಎಂಬ ಪ್ರಬಲ ಸ್ವದೇಶಾಭಿಮಾನ ಜಪಾನಿಯರದು.

ಆಯಿತು. ಹಿಂದಿನ ಪೀಳಿಗೆಯ ಕತೆಯಂತೂ ಮುಗಿಯಿತು. ಈಗಿನ ತಲೆಮಾರಾದರೂ ಎಚ್ಚೆತ್ತುಕೊಂಡು ಅನಗತ್ಯ ಕಾಲಹರಣವನ್ನು ನಿಲ್ಲಿಸಬೇಕು. ಸದಾ ಓದುವುದು, ಬರೆಯುವುದು, ಸಂಘ ಸಂಸ್ಥೆಗಳಲ್ಲಿ ದುಡಿಯುವುದು,

ಏನಾದರೊಂದು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ನಿರತರಾಗಬೇಕು.

ನಾವು ವ್ಯರ್ಥವಾಗಿ ಕಳೆಯುವ ಒಂದೊಂದು ನಿಮಿಷವೂ ಈ ಸ್ಪರ್ಧಾತ್ಮಕ ವಿಶ್ವದಲ್ಲಿ ನಮ್ಮ ದೇಶದ ಸ್ಥಾನಮಾನವನ್ನು ಒಂದೊಂದು ಇಂಚು ಇಳಿಸುತ್ತದೆ ಎಂಬ ಎಚ್ಚರ ಮೂಡಬೇಕು. ಅದೇ ರೀತಿ ನಾವು ಸಾರ್ಥಕವಾಗಿ ರಚನಾತ್ಮಕವಾಗಿ ಉಪಯೋಗಿಸಿಕೊಳ್ಳುವ ಒಂದೊಂದು ನಿಮಿಷವೂ ನಮ್ಮ ದೇಶವನ್ನು ಪ್ರಗತಿಯ ಮೆಟ್ಟಿಲಿನಲ್ಲಿ. ಒಂದೊಂದು ಹಂತ ಏರಿಸುತ್ತದೆ ಎಂಬ ಅರಿವು ಮೂಡಬೇಕು.

ಅಂದಿನ ದಿನವೇ ನಮ್ಮ ನಾಡಿಗೆ ಸುದಿನ, ಅಂದೇ ನಮ್ಮ ಭಾಗ್ಯೋದಯದ ನಾಂದಿ. ಸಮಯದ ಸದುಪಯೋಗ: ಒಂದು ವರ್ಷದ ಮಹತ್ವಗೊತ್ತೇ? ನಪಾಸಾದ ವಿದ್ಯಾರ್ಥಿಯನ್ನು ಕೇಳಿ.

ಒಂದು ತಿಂಗಳ ಮಹತ್ವಗೊತ್ತೇ? ಪೂರ್ಣಾವಧಿ ತುಂಬದೇ ಹೆತ್ತ ತಾಯಿಯನ್ನು ಕೇಳಿ. ಒಂದು ದಿನದ ಮಹತ್ವಗೊತ್ತೇ? ದಿನಗೂಲಿ ಕಾರ್ಮಿಕನನ್ನು ಕೇಳಿ. ಒಂದು ತಾಸಿನ ಬೆಲೆ ಗೊತ್ತೇ? ಪಾಠ ಮಾಡಲು ಹೊರಟ ಶಿಕ್ಷಕನನ್ನು ಕೇಳಿ. ಒಂದು ನಿಮಿಷದ ಮಹತ್ವ ಗೊತ್ತೇ? ರೈಲು ತಪ್ಪಿಸಿಕೊಂಡ ಪ್ರಯಾಣಿಕನನ್ನು ಕೇಳಿ. ಒಂದು ಸೆಕೆಂಡಿನ ಮಹತ್ವ ಗೊತ್ತೇ? ಕ್ಷಣ ಮಾತ್ರದಲ್ಲಿ ಅಪಘಾತದಿಂದ ಪಾರಾದವನನ್ನು ಕೇಳಿ.

ಒಂದು ಮಿಲಿ ಸೆಕೆಂಡಿನ ಮಹತ್ವ ಗೊತ್ತೇ? ಒಲಂಪಿಕ್ ಪಂದ್ಯದಲ್ಲಿ ಚಿನ್ನದ ಪದಕ ಪಡೆಯದವನನ್ನು ಕೇಳಿ.



ಹನುಮಂತಗೌಡ ಗೊಲ್ಲರ
ಸಾಹಿತಿಗಳು, ಹಾವೇರಿ.

ಪ್ರಶಾಂತಿ ಕುಟೀರದ ಸುವರ್ಣ ಮಹೋತ್ಸವ ಕಾರ್ಯಕ್ರಮ

ಡಾ. ರಾಜ್‌ಕುಮಾರ್ ಯೋಗಸಾಧನೆ ಸ್ಮರಿಸಿದ ಪ್ರಧಾನಿ ಮೋದಿ


ಪಾಂಡವ ನ್ಯೂಸ್, ಬೆಂಗಳೂರು : ಯೋಗ ಕ್ಷೇತ್ರಕ್ಕೆ ಕರ್ನಾಟಕ ನೀಡಿರುವ ಕೊಡುಗೆ ಅಪಾರವಾಗಿದೆ. ಕನ್ನಡ ಚಿತ್ರರಂಗದ ಮೇರು ನಟ, ವರನಟ ಡಾ. ರಾಜ್‌ಕುಮಾರ್ ಅವರೂ ಕಲಾ ಕ್ಷೇತ್ರದ ಜತೆಗೆ ಯೋಗ ಕ್ಷೇತ್ರಕ್ಕೂ ಸೇವೆ ಸಲ್ಲಿಸಿದ ಯೋಗಾಭ್ಯಾಸಿಯಾಗಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಸ್ಮರಿಸಿದರು.

ಬೆಂಗಳೂರಿನ ಜಿಗಣಿ ಸಮೀಪದ ಪ್ರಶಾಂತಿ ಕುಟೀರದಲ್ಲಿ ಶುಕ್ರವಾರ ನಡೆದ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆ (ಎಸ್–ವ್ಯಾಸ)ಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕದ ಯೋಗ ಪರಂಪರೆ, ಪ್ರಶಾಂತಿ ಕುಟೀರದ ಐದು ದಶಕಗಳ ಸಾಧನೆ ಹಾಗೂ ಜಾಗತಿಕ ಮಟ್ಟದಲ್ಲಿ ಯೋಗಕ್ಕೆ ದೊರೆತಿರುವ ಮನ್ನಣೆಯನ್ನು ಶ್ಲಾಘಿಸಿದರು.ಕರ್ನಾಟಕದ ನೆಲ ಶತಮಾನಗಳಿಂದ ಯೋಗದ ಕೇಂದ್ರವಾಗಿದೆ. ಅನೇಕ ಯೋಗಾಚಾರ್ಯರು ಮತ್ತು ವಿದ್ವಾಂಸರು ಇಲ್ಲಿ ಜನ್ಮತಾಳಿ ಯೋಗ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಚಿತ್ರರಂಗದ ಮಹಾನ್ ಕಲಾವಿದ ಡಾ. ರಾಜ್‌ಕುಮಾರ್ ಅವರಂತಹವರು ಕಲಾ ಕ್ಷೇತ್ರದ ಜತೆಗೆ ಯೋಗದ ಸೇವೆಯನ್ನೂ ಮಾಡಿದ್ದಾರೆ. ಇಂತಹ ಮಹನೀಯರ ಕೊಡುಗೆ ಕರ್ನಾಟಕದ ಪರಂಪರೆಯ ಹೆಮ್ಮೆಯ ಭಾಗವಾಗಿದೆ ಎಂದು ಹೇಳಿದರು.ಸಾಮಾನ್ಯ ಯೋಗ ಕೇಂದ್ರದಿಂದ ಜಾಗತಿಕ ಚಳವಳಿ : ಪ್ರಶಾಂತಿ ಕುಟೀರದ ಐದು ದಶಕಗಳ ಪಯಣ ಸೇವೆ ಮತ್ತು ಸಮರ್ಪಣೆಯ ಅಪೂರ್ವ ಗಾಥೆಯಾಗಿದೆ. ಸಾಮಾನ್ಯ ಯೋಗ ಕೇಂದ್ರವಾಗಿ ಆರಂಭವಾದ ಸಂಸ್ಥೆ ಇಂದು ದೊಡ್ಡ ಚಳವಳಿಯಾಗಿ ಬೆಳೆದಿರುವುದು ಪ್ರೇರಣಾದಾಯಕ. ಇದರ ಸಾಧನೆ ಮತ್ತು ಸೇವೆಯ ಕುರಿತು ಪ್ರತಿಯೊಬ್ಬ ಭಾರತೀಯನೂ ತಿಳಿದುಕೊಳ್ಳಬೇಕು. ಸಂಸ್ಥೆಯೊಂದಿಗೆ ಸಂಪರ್ಕ ಹೊಂದಿರುವ ಲಕ್ಷಾಂತರ ಯೋಗ ಸಾಧಕರಿಗೂ ಸುವರ್ಣ ಮಹೋತ್ಸವದ ಶುಭಾಶಯಗಳನ್ನು ತಿಳಿಸುತ್ತೇನೆ ಎಂದರು.1975ರಲ್ಲಿ ಸ್ಥಾಪನೆಯಾದ ಪ್ರಶಾಂತಿ ಕುಟೀರವು ಭಾರತೀಯ ಆಧ್ಯಾತ್ಮಿಕ ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಸಮನ್ವಯಗೊಳಿಸುವ ಉದ್ದೇಶದೊಂದಿಗೆ ಬೆಳೆದಿದೆ. ಇದರ ಭಾಗವಾಗಿ ರೂಪುಗೊಂಡ ಎಸ್–ವ್ಯಾಸ ಸಂಸ್ಥೆ 2002ರಲ್ಲಿ ಡೀಮ್ಡ್ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ. ಯೋಗ ಶಿಕ್ಷಣ, ವೈಜ್ಞಾನಿಕ ಸಂಶೋಧನೆ ಮತ್ತು ಆರೋಗ್ಯ ಸೇವೆಗಳ ಕ್ಷೇತ್ರದಲ್ಲಿ ಪ್ರಮುಖ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ಯೋಗಾಭ್ಯಾಸಿಗಳಿಗೆ ತರಬೇತಿ ನೀಡುವುದಷ್ಟೇ ಅಲ್ಲದೆ, ಸಮಾಜಕ್ಕೆ ಸೇವೆ ಸಲ್ಲಿಸುವ ಶಿಕ್ಷಕರು, ವೈದ್ಯರು, ಸಂಶೋಧಕರು ಮತ್ತು ತತ್ವಚಿಂತಕರನ್ನು ರೂಪಿಸುವ ಕಾರ್ಯವನ್ನು ಸಂಸ್ಥೆ ಮಾಡುತ್ತಿದೆ. ಯೋಗದ ಜತೆಗೆ ಆಯುರ್ವೇದ, ನ್ಯಾಚುರೋಪತಿ ಹಾಗೂ ಆಧುನಿಕ ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಆರೋಗ್ಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಒತ್ತಡ ಮತ್ತು ಜೀವನಶೈಲಿಗೆ ಸಂಬಂಧಿಸಿದ ಕಾಯಿಲೆಗಳ ಕುರಿತು ನಡೆಸಿರುವ ಸಂಶೋಧನೆಗಳು ಜಗತ್ತಿನ ಜನರಿಗೆ ಉಪಯುಕ್ತವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಶ್ವಕ್ಕೆ ಯೋಗದ ಮೂಲಕ ಭಾರತದ ಪರಿಚಯ : ಕಳೆದ 12 ವರ್ಷಗಳಲ್ಲಿ ಭಾರತ ತನ್ನ ಸಂಸ್ಕೃತಿ, ಪರಂಪರೆ ಮತ್ತು ಜ್ಞಾನವಿಜ್ಞಾನವನ್ನು ಜಗತ್ತಿನ ಮುಂದೆ ಆತ್ಮವಿಶ್ವಾಸದಿಂದ ಪರಿಚಯಿಸುತ್ತಿದೆ. ಭಾರತದ ಪ್ರಯತ್ನದಿಂದ ಅಂತಾರಾಷ್ಟ್ರೀಯ ಯೋಗ ದಿನ ಜಾಗತಿಕ ಆಚರಣೆಯಾಗಿದೆ. ಆಸ್ಟ್ರೇಲಿಯಾದಿಂದ ಆಫ್ರಿಕಾ, ಅಮೆರಿಕದವರೆಗೆ ಕೋಟ್ಯಂತರ ಜನರು ಯೋಗ ದಿನದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಜಗತ್ತಿನ ಅನೇಕ ರಾಷ್ಟ್ರಗಳ ಶಾಲೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕಾರ್ಯಸ್ಥಳಗಳಲ್ಲಿಯೂ ಯೋಗಾಭ್ಯಾಸ ಜನಪ್ರಿಯವಾಗುತ್ತಿದೆ ಎಂದರು.

ಸೌದಿ ಅರೇಬಿಯಾದಲ್ಲಿ ಯೋಗಕ್ಕೆ ಕ್ರೀಡಾ ಚಟುವಟಿಕೆಯಾಗಿ ಮಾನ್ಯತೆ ದೊರೆತಿರುವುದನ್ನು ಉದಾಹರಿಸಿದ ಅವರು, ಅಲ್ಲಿನ ಕ್ರೀಡಾ ಸಚಿವಾಲಯವು ಯೋಗದ ಪ್ರಚಾರಕ್ಕಾಗಿ ಭಾರತದ ಆಯುಷ್ ಸಚಿವಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ತಿಳಿಸಿದರು.

ವಿದೇಶಿ ಗಣ್ಯರು ಮತ್ತು ವಿಶ್ವ ನಾಯಕರೊಂದಿಗೆ ಮಾತುಕತೆ ನಡೆಸುವ ಸಂದರ್ಭದಲ್ಲಿಯೂ ಯೋಗದ ಕುರಿತು



ಚರ್ಚೆಯಾಗುತ್ತದೆ. ಅನೇಕ ರಾಷ್ಟ್ರಗಳ ಪ್ರಮುಖರ ಕುಟುಂಬದ ಸದಸ್ಯರು ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡಿದ್ದಾರೆ. ಯೋಗ ಇಂದು ಭಾರತವನ್ನು ಅರಿಯುವ ಪ್ರವೇಶದ್ವಾರವಾಗಿ ರೂಪುಗೊಂಡಿದೆ. ಯೋಗದ ಮೂಲಕ ವಿದೇಶಿಯರಲ್ಲಿ ಭಾರತದ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಜ್ಞಾನದ ಬಗ್ಗೆ ಆಸಕ್ತಿ ಹೆಚ್ಚುತ್ತಿದೆ ಎಂದು ಹೇಳಿದರು.

ಯೋಗಾಸನಕ್ಕೆ ಕ್ರೀಡೆಯ ಮಾನ್ಯತೆ : ಯೋಗದ ಪ್ರಸಾರಕ್ಕೆ ಅನುಗುಣವಾಗಿ ಭಾರತದಲ್ಲಿ ಯೋಗಾಸನಕ್ಕೆ ಸ್ಪರ್ಧಾತ್ಮಕ ಕ್ರೀಡೆಯ ಮಾನ್ಯತೆ ನೀಡಲಾಗಿದೆ. ಖೇಲೋ ಇಂಡಿಯಾ ಮತ್ತು ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿಯೂ ಯೋಗಾಸನಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಯೋಗ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಯುವಜನ–ರಿಗೆ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಲು ಹೊಸ ಅವಕಾಶಗಳು ದೊರೆಯಲಿವೆ ಎಂದು ತಿಳಿಸಿದರು.ಯೋಗದಂತೆಯೇ ಆಯುರ್ವೇದಕ್ಕೂ ಸರ್ಕಾರ ಆದ್ಯತೆ ನೀಡುತ್ತಿದೆ. ಆಯುಷ್ ಸಚಿವಾಲಯ ಸ್ಥಾಪನೆ, ಆಯುರ್ವೇದ ಸಂಶೋಧನೆ, ಪೇಟೆಂಟ್‌ಗಳಿಗೆ ಪ್ರೋತ್ಸಾಹ ಹಾಗೂ ಆಯುಷ್ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡಲಾಗುತ್ತಿದೆ. 150ಕ್ಕೂ ಹೆಚ್ಚು ಆಯುರ್ವೇದ ತರಬೇತಿ ಕೋರ್ಸ್‌ಗಳಿಗೆ ವಿವಿಧ ದೇಶಗಳಲ್ಲಿ ಮಾನ್ಯತೆ ದೊರೆತಿದ್ದು, ಆಯುರ್ವೇದ ವಿಸ್ತರಣೆಗೆ 28 ದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ವಿದೇಶಗಳಿಂದ ಚಿಕಿತ್ಸೆಗಾಗಿ ಭಾರತಕ್ಕೆ ಬರುವವರಿಗೆ ಅನುಕೂಲವಾಗುವಂತೆ ಇ–ಆಯುಷ್ ವೀಸಾ ವ್ಯವಸ್ಥೆ ಆರಂಭಿಸಲಾಗಿದೆ. ಗುಜರಾತಿನ ಜಾಮ್‌ನಗರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಸಾಂಪ್ರದಾಯಿಕ ವೈದ್ಯಕೀಯ ಕೇಂದ್ರ ಸ್ಥಾಪನೆಯಾಗಿದ್ದು, ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳ ಸಂಶೋಧನೆ ಮತ್ತು ಅಂತರರಾಷ್ಟ್ರೀಯ ಸಹಕಾರಕ್ಕೆ ಉತ್ತೇಜನ ನೀಡುತ್ತಿದೆ ಎಂದರು.ಶೇಷಾದ್ರಿ ಅವರ ಸೇವಾ ಜೀವನ ಸ್ಮರಣೆ : ಪ್ರಶಾಂತಿ ಕುಟೀರದ ಸುವರ್ಣ ಮಹೋತ್ಸವದ ಜತೆಗೆ ಹಿರಿಯ ಚಿಂತಕ, ಲೇಖಕ ಹಾಗೂ ಸಂಘಟಕರಾದ ಎಚ್.ವಿ. ಶೇಷಾದ್ರಿ ಅವರ ಜನ್ಮಶತಮಾನೋತ್ಸವವನ್ನೂ ಆಚರಿಸಲಾಗುತ್ತಿದೆ. ಅವರಿಗೆ ಗೌರವಪೂರ್ವಕ ನಮನ ಸಲ್ಲಿಸಿದ ಪ್ರಧಾನಿ, ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ ಮಾಡುವ ಧ್ಯೇಯದೊಂದಿಗೆ ಶೇಷಾದ್ರಿ ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು ಎಂದು ಸ್ಮರಿಸಿದರು.ಅಪಾರ ಅನುಭವ ಮತ್ತು ದೊಡ್ಡ ವ್ಯಕ್ತಿತ್ವ ಹೊಂದಿದ್ದರೂ ಅವರಲ್ಲಿ ಸರಳತೆ, ವಿನಯ ಮತ್ತು ನಿಸ್ವಾರ್ಥ ಸೇವಾ ಮನೋಭಾವವಿತ್ತು. ತಾವು ಹಿಂದೆ ಉಳಿದು ಇತರರನ್ನು ಮುಂದೆ ತರುವುದು, ಜನರನ್ನು ಒಗ್ಗೂಡಿಸಿ ದೇಶಸೇವೆಗೆ ಸಿದ್ಧಗೊಳಿಸುವುದು ಅವರ ಜೀವನದ ಪ್ರಮುಖ ಸಾಧನೆಯಾಗಿತ್ತು ಎಂದರು.ತಾಯಿಯ ನಿಸ್ವಾರ್ಥ ಪ್ರೀತಿಯನ್ನು ಸಮಾಜಸೇವೆಗೆ ಹೋಲಿಸುತ್ತಿದ್ದ ಶೇಷಾದ್ರಿ ಅವರು, ತಾಯಿ ಮಗುವಿನ ಆರೈಕೆಗಾಗಿ ಯಾವುದೇ ಪ್ರತಿಫಲ ಬಯಸದೆ ಇಡೀ ರಾತ್ರಿ ಜಾಗರಣೆ ಮಾಡುತ್ತಾಳೆ. ಅದೇ ನಿಸ್ವಾರ್ಥ ಮನೋಭಾವವನ್ನು ಸಮಾಜದ ಸೇವೆಗೂ ವಿಸ್ತರಿಸಿದರೆ ಸಮಾಜಕ್ಕೆ ದೊಡ್ಡ ಪ್ರಯೋಜನವಾಗುತ್ತದೆ ಎಂಬ ಸಂದೇಶ ನೀಡುತ್ತಿದ್ದರು ಎಂದು ಮೋದಿ ವಿವರಿಸಿದರು.ಶೇಷಾದ್ರಿ ಅವರಿಂದ ನಿರಂತರ ಪ್ರೀತಿ ಮತ್ತು ಮಾರ್ಗದರ್ಶನ ಪಡೆದಿರುವುದು ತಮ್ಮ ಸೌಭಾಗ್ಯ. ಅವರೊಂದಿಗೆ ಕಳೆದ ಸಮಯ ಮತ್ತು ಅವರು ನೀಡಿದ ಸಲಹೆಗಳು ಇಂದಿಗೂ ಅಮೂಲ್ಯ ನೆನಪುಗಳಾಗಿವೆ ಎಂದು ಹೇಳಿದರು.

ವಿಕಸಿತ ಭಾರತಕ್ಕೆ ಯೋಗದ ಕೊಡುಗೆ :140 ಕೋಟಿ ಭಾರತೀಯರು ವಿಕಸಿತ ಭಾರತ ನಿರ್ಮಾಣದ ಗುರಿಯೊಂದಿಗೆ ಶ್ರಮಿಸುತ್ತಿದ್ದಾರೆ. ಆರೋಗ್ಯಕರ ಜೀವನಶೈಲಿ ಪ್ರತಿಯೊಂದು ಕುಟುಂಬದ ಆದ್ಯತೆಯಾಗಬೇಕು. ಇದರಲ್ಲಿ ಯೋಗ ಮಹತ್ವದ ಪಾತ್ರ ವಹಿಸಬಲ್ಲದು. ಕಡಿಮೆ ವೆಚ್ಚದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಸಹಕಾರಿಯಾಗಿದೆ. ಯೋಗದಿಂದ ರೋಗಗಳಿಂದ ಮುಕ್ತರಾಗುವುದರ ಜತೆಗೆ ಅನಗತ್ಯ ಜೀವನಾಸಕ್ತಿಗಳಿಂದಲೂ ದೂರವಾಗಬಹುದು ಎಂದು ಅಭಿಪ್ರಾಯಪಟ್ಟರು.ಪ್ರಶಾಂತಿ ಕುಟೀರವು ಆರೋಗ್ಯಕರ ಸಮಾಜ ನಿರ್ಮಾಣದ ಈ ಪ್ರಯತ್ನದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಸಂಸ್ಥೆಯು ತನ್ನ ಮುಂದಿನ 25 ವರ್ಷಗಳ ಅಭಿವೃದ್ಧಿಗೆ ಈಗಿನಿಂದಲೇ ಸಮಗ್ರ ಯೋಜನೆ ರೂಪಿಸಬೇಕು. ಪ್ರಶಾಂತಿ ಕುಟೀರ 75 ವರ್ಷಗಳನ್ನು ಪೂರೈಸುವ ಹೊತ್ತಿಗೆ ಭಾರತ ವಿಕಸಿತ ರಾಷ್ಟ್ರವಾಗಿರಬೇಕು. ಆ ಗುರಿ ಸಾಧನೆಗೆ ಸಂಸ್ಥೆಯ ಮುಂದಿನ 25 ವರ್ಷಗಳ ಸೇವೆ ಮತ್ತು ಸಂಶೋಧನೆ ಪೂರಕವಾಗಬೇಕು ಎಂದು ಎಸ್–ವ್ಯಾಸ ಅಧ್ಯಕ್ಷ ಡಾ. ಎಚ್.ಆರ್. ನಾಗೇಂದ್ರ ಅವರಿಗೆ ಕರೆ ನೀಡಿದರು.ಕಾರ್ಯಕ್ರಮದಲ್ಲಿ ಕರ್ನಾಟಕದ ರಾಜ್ಯಪಾಲೆ ಸುಧಾ ಯಾದವ್, ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಎಸ್–ವ್ಯಾಸ ಅಧ್ಯಕ್ಷ ಡಾ. ಎಚ್.ಆರ್. ನಾಗೇಂದ್ರ, ಉಪಾಧ್ಯಕ್ಷೆ ಡಾ. ಆರ್. ನಾಗರತ್ನ, ಕುಲಾಧಿಪತಿ ಎಚ್.ಆರ್. ದಯಾನಂದ ಸ್ವಾಮಿ, ಕುಲಪತಿ ಎನ್.ಕೆ. ಮಂಜುನಾಥ್ ಶರ್ಮಾ, ಸಂಸದ ಡಾ. ಸಿ.ಎನ್. ಮಂಜುನಾಥ್ ಹಾಗೂ ದಕ್ಷಿಣ ಕೊರಿಯಾದ ಮಿಯಾರ್ಂಗ್ ನಗರದ ಮೇಯರ್ ಅಹ್ನ್ ಬಿಯಾಂಗ್–ಗು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ನ.18 ರಂದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಕರ್ನಾಟಕ ರಾಜ್ಯೋತ್ಸವ; ಸಾಂಸ್ಕೃತಿಕ ಕಾರ್ಯಕ್ರಮ, ಧೀಮಂತ ಸನ್ಮಾನ

ಪಾಂಡವ ನ್ಯೂಸ್, ಹುಬ್ಬಳ್ಳಿ : ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಧೀಮಂತ ಸನ್ಮಾನ ಕಾರ್ಯಕ್ರಮವನ್ನು ನವೆಂಬರ್ 18ರಂದು ಮಧ್ಯಾಹ್ನ 3.30ಕ್ಕೆ ಇಂದಿರಾಗಾಜಿನ ಮನೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಕ್ಷಣ, ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಸಲೀಂ ಅಹ್ಮದ್ ಅವರು ಕಾರ್ಯಕ್ರಮದಲ್ಲಿ ಘನ ಉಪಸ್ಥಿತಿ ವಹಿಸುವರು.ಕಾರ್ಮಿಕ ಮತ್ತು ಉದ್ಯೋಗಖಾತೆ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷಎಸ್. ಲಾಡ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಹಾಗೂ ಶಾಸಕರಾದ ಅಬ್ಬಯ್ಯ ಪ್ರಸಾದ, ವಾಯುವ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಭರಮಗೌಡ (ರಾಜು) ಅಲಗೌಡ ಕಾಗೆ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧ್ಯಕ್ಷ ಸೈಯದ್ ಅಜೀಮ್ ಪೀರ್ ಎಸ್. ಖಾದ್ರಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ವಿನಯ ಕುಲಕರ್ಣಿ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸುವರು. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರರಾದ ದುರ್ಗಮ್ಮ ಶಶಿಕಾಂತ ಬಿಜವಾಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.ಮುಖ್ಯ ಅತಿಥಿಗಳಾಗಿ ರಾಜ್ಯಸಭೆ ಸಂಸದರಾದ ಪ್ರೊ.ಎಂ. ನಾಗರಾಜ, ಶಾಸಕರಾದ ಬಸವರಾಜ ಹೊರಟ್ಟಿ, ವಿನಯ ಕುಲಕರ್ಣಿ, ಅರವಿಂದ ಚಂದ್ರಕಾಂತ ಬೆಲ್ಲದ, ಎಸ್.ಫ್ಹಿ. ಸಂಕನೂರ, ಪ್ರದೀಪ ಶೆಟ್ಟರ, ಮಹೇಶ ಟೆಂಗಿನಕಾಯಿ, ಎಫ್.ಹೆಚ್. ಜಕಪ್ಪನವರ, ಲಿಂಗರಾಜ ಪಾಟೀಲ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ನಾಗೇಂದ್ರ ಕುಮಾರ್, ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ್ ಗಿರೆಪ್ಪ ಇಟಗಿ, ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಬರ್ಟ್ ದದ್ದಾಪುರಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ರತ್ನಾಬಾಯಿ ಏಕನಾಥ ನಾಝುರೆ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ಪಾಟೀಲ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಜತ ವಿಶ್ವಪ್ರಕಾಶ ಉಳ್ಳಾಗಡ್ಡಿಮಠ ಅವರು ಭಾಗವಹಿಸುವರು.

ಕನಕದಾಸ ಉಣ್ಣೆ ನೇಕಾರರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಅಶೋಕ ಬಣಕಾರ, ಉಪಾಧ್ಯಕ್ಷರಾಗಿ ಚಂದ್ರಶೇಖರಪ್ಪ ದೊಡ್ಡಮನಿ ಅವಿರೋಧ ಆಯ್ಕೆ



ಪಾಂಡವ ನ್ಯೂಸ್, ಹಾವೇರಿ : ನಗರದ ಶ್ರೀ ಕನಕದಾಸ ಉಣ್ಣೆ ನೇಕಾರರ ಉತ್ಪಾದಕರ ಮಾರಾಟ ಸಹಕಾರಿ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಶೋಕ ಶಿವಪ್ಪ ಬಣಕಾರ ಅಧ್ಯಕ್ಷರಾಗಿ, ಚಂದ್ರಶೇಖರಪ್ಪ ದೊಡ್ಡಮನಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.ಎರಡೂ ಸ್ಥಾನಗಳಿಗೆ ತಲಾ ಒಬ್ಬರೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆದಿದೆ. ಚುನಾವಣಾಧಿಕಾರಿ ಎಸ್.ಜಿ. ಸುಣಗಾರ ಅವರು ನೂತನ ಪದಾಧಿಕಾರಿಗಳ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದರು.ನೂತನ ಅಧ್ಯಕ್ಷ ಅಶೋಕ ಶಿವಪ್ಪ ಬಣಕಾರ ಹಾಗೂ ಉಪಾಧ್ಯಕ್ಷ ಚಂದ್ರಶೇಖರಪ್ಪ ದೊಡ್ಡಮನಿ ಅವರನ್ನು ಸಂಘದ ಆಡಳಿತ ಮಂಡಳಿಯ ನಿರ್ದೇಶಕರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ನೂತನ ಪದಾಧಿಕಾರಿಗಳ ನೇತೃತ್ವದಲ್ಲಿ ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಲಿ. ಉಣ್ಣೆ ನೇಕಾರರ ಉತ್ಪಾದನೆ ಮತ್ತು ಮಾರಾಟ ಚಟುವಟಿಕೆಗಳಿಗೆ ಉತ್ತೇಜನ ದೊರೆಯುವುದರ ಜತೆಗೆ ಸಂಘದ ಸದಸ್ಯರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಉತ್ತಮವಾಗಿ ಕಾರ್ಯನಿರ್ವಹಿಸಲಿ ಎಂದು ಆಶಿಸಿದರು.

ಆಡಳಿತ ಮಂಡಳಿಯ ನಿರ್ದೇಶಕ ಶೇಖರಗೌಡ ಗಾಜಿಗೌಡರ ಸೇರಿದಂತೆ ಸಂಘದ ಇತರ ನಿರ್ದೇಶಕರು ಉಪಸ್ಥಿತರಿದ್ದರು.

ಬಡ ನಿವೇಶನದಾರರಿಗೆ ಸಕ್ರಮದ ಭಾಗ್ಯ ಕಲ್ಪಿಸಲು ಕೃಷ್ಣಾ ರಾಯಬಾಗಿ ಮನವಿ

ಪಾಂಡವ ನ್ಯೂಸ್, ಬೆಟಗೇರಿ : ಬಡವರ ಸ್ವಂತ ನಿವೇಶನದ ಕನಸನ್ನು ನನಸಾಗಿಸುವ ಉದ್ದೇಶದಿಂದ ಜಾರಿಗೊಳಿಸಿರುವ ಭೂ ಗ್ಯಾರಂಟಿ ಅಕ್ರಮ–ಸಕ್ರಮ ಯೋ